ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 99 RNI Number : KNKAN/25/A2770 18-04-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :99 ರಾಯಚೂರು 18-04-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಯೋಗೀಶ್ ಗೌಡ ಕೊಲೆ ಪ್ರಕರಣ:ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು, ಏ.17–

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ದೋಷಿಗಳಾದ ಮಾಜಿ ಸಚಿವ ಹಾಗೂ ಹಾಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇಂದು ಮಹತ್ವದ ತೀರ್ಪು ನೀಡಿದೆ.

ಕೊನೆಯ ಅಪರಾಧಿ ಪೊಲೀಸ್ ಅಧಿಕಾರಿ ಚನ್ನಕೇಶವ ಟಿಗ್ರಿಕರ್ ಅವರಿಗೆ 7 ವರ್ಷ ಸಾಧಾರಣ ಶಿಕ್ಷೆ ವಿಧಿಸಲಾಗಿದೆ. ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಶಿಕ್ಷೆ ಪ್ರಕಟಿಸಿದರು.

ವಿಕ್ರಮ್, ಕೀರ್ತಿ ಕುಮಾರ್, ಸಂದೀಪ್ ಸವದತ್ತಿ, ವಿನಾಯಕ್ ಕಟಗಿ, ಮಹಾಬಲೇಶ್ವರ್ ಹೊಂಗಲ್ ಅಲಿಯಾಸ್ ಮುದಕ, ಸಂತೋಷ್ ಸವದತ್ತಿ, ಎಂ.ದಿನೇಶ್, ಎಸ್.ಅಶ್ವತ್, ಕೆ.ಎಸ್.ಸುನೀಲ್, ನಜೀರ್ ಅಹ್ಮದ್, ಶನ್ವಾಜ್, ಕೆ.ನೂತನ್, ಸಿ.ಹರ್ಷಿತ್, ಚಂದ್ರಶೇಖರ್ ಇಂಡಿ ಅಲಿಯಾಸ್, ಚಂದ್ರು ಮಾಮ, ವಿಕಾಸ್ ಕಲಬುರ್ಗಿ ಜೀವಾವಧಿ ಶಿಕ್ಷೆಗೆ ಗುರಿಯಾದವರು.

ಅಪರಾಧಿಗಳಿಗೆ ಐಪಿಸಿ ಸೆಕ್ಷನ್ 302(ಕೊಲೆ) ಅಡಿಯಲ್ಲಿ ಜೀವಾವಧಿ ಶಿಕ್ಷೆ ಮತ್ತು ಸೆಕ್ಷನ್ 120(ಬಿ) (ಕೊಲೆಗೆ ಪಿತೂರಿ) ಅಡಿಯಲ್ಲಿ 7 ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಎರಡೂ ಶಿಕ್ಷೆಗಳನ್ನು ಏಕಕಾಲಕ್ಕೆ ಅನುಭವಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರಕರಣ ಸಂಬಂಧ ಸಿಬಿಐ ತನಿಖೆ ನಡೆಸಿ ಸಲ್ಲಿಸಿದ್ದ ಆರೋಪಪಟ್ಟಿಯನ್ನು ಪರಿಗಣಿಸಿದ್ದ ನ್ಯಾಯಾಲಯ ಬುಧವಾರ ಎಲ್ಲ ಆರೋಪಿಗಳನ್ನು 'ದೋಷಿಗಳು' ಎಂದು ಪ್ರಕಟಿಸಿತ್ತು.

ಪ್ರಕರಣದ ಕಾಲಾನುಕ್ರಮ: 2016ರ ಜೂನ್ 15ರಂದು ಧಾರವಾಡ ಉಪನಗರ ಪೊಲೀಸ್ ಠಾಣಾ ವ್ಯಾಪ್ತಿಯ ಜಿಮ್‌ನಲ್ಲಿ ಯೋಗೀಶ್ ಗೌಡ ಕೊಲೆ ನಡೆದಿತ್ತು. ಬೆಳಗ್ಗೆ ಜಿಮ್‌ನಲ್ಲಿ ದಿನ ಪತ್ರಿಕೆ ಓದುತ್ತಿರುವಾಗಲೇ ಕೃತ್ಯ ನಡೆದಿತ್ತು. ಆರಂಭದಲ್ಲಿ ಧಾರವಾಡ ಉಪನಗರ ಪೊಲೀಸರು ತನಿಖೆ ನಡೆಸಿದ್ದರು. ಬಳಿಕ ಸೂಕ್ತ ರೀತಿಯಲ್ಲಿ ತನಿಖೆ ಆಗುತ್ತಿಲ್ಲ ಎಂದು ಕುಟುಂಬಸ್ಥರು ಆರೋಪಿಸಿದ್ದರು.

ತನಿಖೆ ನಡೆಸಿದ ಉಪನಗರ ಪೊಲೀಸರು ಬಿ ರಿಪೋರ್ಟ್ ಸಲ್ಲಿಸಿದ್ದರು. 2019ರಲ್ಲಿ ವಿನಯ್ ಕುಲಕರ್ಣಿ ಅವರು ಸಾಕ್ಷ್ಯ ನಾಶಪಡಿಸಿದ್ದಾರೆ ಎಂದು ಅವರು ಹೈಕೋರ್ಟ್ ಮೊರೆ ಹೋಗಿದ್ದರು. ಆ ವೇಳೆ ಹೈಕೋರ್ಟ್ ಪ್ರತ್ಯೇಕ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶಿಸಿತ್ತು.ಬಿ.ಎಸ್.ಯಡಿಯೂರಪ್ಪ ಸಿಎಂ ಆಗಿದ್ದಾಗ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದ್ದರು. ತನಿಖೆ ನಡೆಸುತ್ತಿದ್ದ ಸಿಬಿಐ, 2020ರ ನವೆಂಬರ್ 5ರಂದು ವಿನಯ್ ಕುಲಕರ್ಣಿ ಅವರನ್ನು ಬಂಧಿಸಿತ್ತು.

ಸಿಬಿಐ ಆರೋಪಿಗಳ ವಿರುದ್ಧ ಐಪಿಸಿ ವಿವಿಧ ಸೆಕ್ಷನ್‌ಗಳು, ಶಸ್ತ್ರಾಸ್ತ್ರ ಕಾಯಿದೆಯ ಸೆಕ್ಷನ್ 25 ಜೊತೆಗೆ 3, 5, 8, 29 ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಸೆಕ್ಷನ್ 13(2) ಜೊತೆಗೆ 13(1)(ಡಿ) ಅಡಿ ಆರೋಪಪಟ್ಟಿ ಸಲ್ಲಿಸಿತ್ತು.

ಬಳಿಕ 2021ರ ಆಗಸ್ಟ್ 11ರಂದು ಸುಪ್ರೀಂಕೋರ್ಟ್ ವಿನಯ್ ಕುಲಕರ್ಣಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಧಾರವಾಡ ಜಿಲ್ಲೆ ಪ್ರವೇಶ ಮಾಡದಂತೆ ನಿಷೇಧ ಹೇರಿತ್ತು.





ವಿನಯ್ ಕುಲಕರ್ಣಿ 2023ರ ವಿಧಾನಸಭೆ ಚುನಾವಣೆಯಲ್ಲಿ ನೆರೆಯ ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಇದ್ದುಕೊಂಡು ಮತಪ್ರಚಾರ ನಿರ್ವಹಿಸುವ ಮೂಲಕ ಶಾಸಕರಾಗಿ ಆಯ್ಕೆಯಾದರು.

ತನಿಖಾ ಸಮಯದಲ್ಲಿ, ಪ್ರಕರಣ ಹಲವಾರು ತಿರುವುಗಳನ್ನು ಪಡೆದುಕೊಂಡಿತ್ತು. ಪ್ರಮುಖ ಆರೋಪಿಗಳಲ್ಲಿ ಇಬ್ಬರು ಮಾಫಿ ಸಾಕ್ಷಿಯಾಗಲು ಒಪ್ಪಿಕೊಂಡಿದ್ದರು.

2025ರ ಜೂನ್ 7ರಂದು ಸುಪ್ರೀಂ ಕೋರ್ಟ್ ವಿಚಾರಣೆ ನಡೆಯುತ್ತಿರುವಾಗ ವಿನಯ್ ಕುಲಕರ್ಣಿ ಅವರು ಸಾಕ್ಷಿಗಳನ್ನು ಸಂಪರ್ಕಿಸಲು ಅಥವಾ ಪ್ರಭಾವ ಬೀರಲು ಪ್ರಯತ್ನಿಸಿದ್ದಾರೆ ಎಂಬುದಕ್ಕೆ ವಿಶ್ವಾಸಾರ್ಹ ಪುರಾವೆಗಳಿವೆ ಎಂದು ಹೇಳಿ, ಜಾಮೀನು ರದ್ದುಗೊಳಿಸಿತ್ತು.

ಸಿಬಿಐ ಅಧಿಕಾರಿಗಳು ಸುಪ್ರೀಂ ಕೋರ್ಟ್ ಜಾಮೀನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು. ನಂತರ ಸುಪ್ರೀಂ ಕೋರ್ಟ್ ಜಾಮೀನು ಅರ್ಜಿ ರದ್ದು ಮಾಡಿ ತ್ತು. ಕೋರ್ಟ್ ಸೂಚನೆಯ ಮೇರೆಗೆ ಎರಡನೇ ಬಾರಿಗೆ ವಿನ ಯ್ ಕುಲಕರ್ಣಿ ಶರಣಾಗಿ ದ್ದರು.


ನಂತರ ನ್ಯಾಯಾಂಗ ಬಂಧನದಲ್ಲಿದ್ದ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 2026ರ ಜನವರಿಯಲ್ಲಿ ಹೈಕೋರ್ಟ್ ವಜಾಗೊಳಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಫೆಬ್ರವರಿ 27ರಂದು ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಇದರಿಂದಾಗಿ ಅವರು ಪರಪ್ಪನ ಅಗ್ರಹಾರ ಜೈಲಿನಿಂದ ಬಿಡುಗಡೆಯಾಗಿದ್ದರು.

ಕಾರು-ಖಾಸಗಿ ಬಸ್ ಮುಖಾಮುಖಿ ಡಿಕ್ಕಿ, 6 ಮಂದಿ ಸಜೀವ ದಹನ

ಸಿರವಾರ,ಏ.17–

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ದೇವಾಪುರ ತಿಂತಿಣಿ ಸೇತುವೆ ಬಳಿ ಕಾರು ಹಾಗೂ ಖಾಸಗಿ ಬಸ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕಾರಿನಲ್ಲಿದ್ದ ಆರು ಮಂದಿ ಸಜೀವ ದಹನವಾಗಿದ್ದಾರೆ.

ಕೃಷ್ಣ ನಾಯಕ್(52), ಅನಂತ ಕಲಾ ನಾಯಕ್ (45), ಶರಣಪ್ಪ (36), ನಿಸರ್ಗ ಶರಣಪ್ಪ (30) ಇವರ ಪುತ್ರ, ಸಿದ್ದಾರ್ಥ ಶರಣಪ್ಪ (3) ಮತ್ತು ಶಶಿಕಲಾ (30) ಮೃತರು. ಮೃತ ಶರಣಪ್ಪ ದಂಪತಿಯ ಪುತ್ರಿಯರಾದ ಅದ್ವಿಕಾ (5) ಮತ್ತು ಶ್ರೀನಿಧಿ (1.5 ವರ್ಷ) ಪರಿಸ್ಥಿತಿ ಚಿಂತಾಜನಕವಾಗಿದೆ. ಇವರನ್ನು ಸ್ಥಳೀಯರು ರಕ್ಷಿಸಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.



ಸಿರವಾರ ಪಟ್ಟಣ ಪಂಚಾಯತಿ ವಾರ್ಡ ನಂ 1 ಸದಸ್ಯರಾದ ಕೃಷ್ಣನಾಯಕ ಅವರು ಕುಂಟುಂಬ (ಹೆಂಡತಿ, ಮಗಳು, ಅಳಿಯ ಮತ್ತು 3 ಜನ ಮೊಮ್ಮಕ್ಕಳು) ಜೊತೆ ದೇವಸ್ಥಾನಕ್ಕೆ ಶುಕ್ರವಾರ ಮುಂಜಾನೆ ಹೋಗಿದ್ದಾರೆ. ಸುರಪುರ ತಾಲೂಕಿನ ತಿಂಥಣಿ ಸೇತುವೆ ಬಳಿಯ ಶಾಂತಪುರ ಕ್ರಾಸ್ ಹತ್ತಿರ ಬೀದರ್ ಬೆಂಗಳೂರು ಹೆದ್ದಾರಿಯಲ್ಲಿ ಖಾಸಗಿ ಬಸ್ ಮತ್ತು ಕೃಷ್ಣನಾಯಕ ಅವರ ಕಾರು ಮುಖಾಮುಖಿ ಡಿಕ್ಕಿಯಾಗಿದೆ. ಢಿಕ್ಕಿಯ ರಭಸಕ್ಕೆ ಕ್ಷಣಾರ್ಧದಲ್ಲಿ ಬೆಂಕಿ ಹೊತ್ತುಕೊಂಡಿದೆ. ರಸ್ತೆಯ ಪಕ್ಕದಲ್ಲಿದ ಸಾರ್ವಜನಿಕರು ಹಿಂಬದಿ ಸಿಟ್ ನಲ್ಲಿದ್ದ ಕೃಷ್ಣನಾಯಕ ಅವರ ಪತ್ನಿ ಅನಂತಕಲಾ ಮಗಳಾದ ನಿಸರ್ಗ ಮತ್ತು ಒಂದು ಮೊಮ್ಮಗುವನ್ನು ಹೊರಗೆ, ತೆಗೆದಿದ್ದಾರೆ. ಮತ್ತೊಂದು ಮಗುವನ್ನು ಮತ್ತು ಮುಂಭಾಗದಲ್ಲಿದ ಕೃಷ್ಣನಾಯಕ ಮತ್ತು ಅವರ ಅಳಿಯ ಶರಣಪ್ಪ, ಮತ್ತೊಂದು ಮೊಮ್ಮಗುವು ಬೆಂಕಿಯ ಕಿನ್ನಾಲೆಗೆ ಸುಟ್ಟು ಕರಕಲಾಗಿದ್ದಾರೆ. ಒಟ್ಟು ನಾಲ್ಕು ಜನ ಸಜೀವ ದಹನವಾದರೆ.

4 ನೇ ಪುಟಕ್ಕೆ...

ಅಧಿಕ ಉಷ್ಣಾಂಶ ಹಿನ್ನಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಸಲಹೆ

ರಾಯಚೂರು ಏಪ್ರಿಲ್ 17

ಭಾರತೀಯ ಹವಾಮಾನ ಇಲಾಖೆಯ ವರದಿಯ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆಯಿದ್ದು, ಬಿಸಿ ಗಾಳಿ (ಹೀಟ್ ವೇವ್) ಎಚ್ಚರಿಕೆ ನೀಡಲಾಗಿದೆ. ಹೀಟ್ ವೇವ್ ಸ್ಟ್ರೋಕ್ ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ ಅವರು ಕೋರಿದ್ದಾರೆ.



ಸೂರ್ಯನ ಶಾಖ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರು ಏನು ಮಾಡಬೇಕು ಎಂಬುದರ ಕುರಿತು ಮಾಹಿತಿಯನ್ನು ನೀಡಿದ್ದಾರೆ.

ಸಾರ್ವಜನಿಕರು ರೇಡಿಯೋ,ಟಿವಿ, ದಿನ ಪತ್ರಿಕೆಗಳಲ್ಲಿ ಬಿಸಿಲಿನ ತಾಪಮಾನದ ಕುರಿತು ಮುನ್ಸೂಚನೆಗಳನ್ನು ಪಡೆದುಕೊಳ್ಳಬೇಕು. ಬಾಯಾರಿಕೆಯಿಲ್ಲದಿದ್ದರೂ ಸಾಧ್ಯವಾದಷ್ಟು ಹೆಚ್ಚಾಗಿ ನೀರನ್ನು ಕುಡಿಯುವುದು. ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸುವುದು, ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು.

ಬಿಸಿಲಿನಲ್ಲಿ ಹೊರಗೆ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಬೂಟುಗಳು ಅಥವಾ ಚಪ್ಪಲಗಳನ್ನು ಬಳಸಿ. ದೂರದ ಪ್ರಯಾಣವನ್ನು ರಾತ್ರಿ ವೇಳೆ ಮಾಡುವುದು ಉತ್ತಮ, ಒಂದು ವೇಳೆ ಪ್ರಯಾಣ ಮಾಡುವ ಸಂದರ್ಭ ಬಂದರೆ ಪ್ರಯಾಣ ಮಾಡುವಾಗ ನಿಮ್ಮೊಂದಿಗೆ ನೀರನ್ನು ತೆಗೆದುಕೊಂಡು ಹೋಗುವುದು. ನೀವು ಹೊರಗೆ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿಯನ್ನು ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಸಹ ಬಳಸಬೇಕು.

ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ , ಶರಬತ್, ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಬಳಸಿ ಅದು ದೇಹವನ್ನು ಪುನಃ ತಂಪಾಗಿಡಲು ಸಹಾಯ ಮಾಡುತ್ತದೆ. ಪ್ರಾಣಿ/ಪಕ್ಷಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಿ. ಆದಷ್ಟು ಫ್ಯಾನಗಳನ್ನು ಬಳಸಿ, ಒದ್ದೆಯಾದ ಬಟ್ಟೆಗಳನ್ನು ಮತ್ತು ಆಗಾಗ್ಗೆ ತಣ್ಣೀರಿನಲ್ಲಿ ಸ್ನಾನ ಮಾಡಿ. ಕೆಲಸದ ಸಮಯವನ್ನು ಆದಷ್ಟು ತಂಪಾದ ಸಮಯದಲ್ಲಿ ಮಾಡುವುದು ಹಾಗೂ ಕೆಲಸದ ಸ್ಥಳದ ಬಳಿ ತಂಪಾದ ಕುಡಿಯುವ ನೀರನ್ನು ಒದಗಿಸಬೇಕು.

ಕೆಲಸ ನಿರ್ವಹಿಸುವ ಗರ್ಭಿಣಿ ಮಹಿಳೆಯರು ಮತ್ತು

4 ನೇ ಪುಟಕ್ಕೆ...

ಯೂಟ್ಯೂಬ್ ವಿಡಿಯೋಗ್ರಾಫರ್ ಬಂಧನಕ್ಕೆ ಇಫ್ತೆಕಾರುದ್ದೀನ್ ಅಹ್ಮದ್ ಒತ್ತಾಯ

ರಾಯಚೂರು, ಏ.17

ಮಧ್ಯರಾತ್ರಿ ವೇಳೆ ಮನೆಗೆ ಅಕ್ರಮವಾಗಿ ಪ್ರವೇಶಿಸಿ ಅವಾಚ್ಯ ಪದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ ಆರೋಪದ ಹಿನ್ನೆಲೆ ಯೂಟ್ಯೂಬ್ ವಿಡಿಯೋಗ್ರಾಫರ್ ದಾನೀಷ್ ಅವರನ್ನು ತಕ್ಷಣ ಬಂಧಿಸಬೇಕು ಎಂದು ಇಫ್ತೆಕಾರುದ್ದೀನ್ ಅಹ್ಮದ್ ಅಲಿಯಾಸ್ ಮದನಿ ಒತ್ತಾಯಿಸಿದರು.



ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್.ಬಿ.ಎಸ್. ನಗರದಲ್ಲಿರುವ ತಮ್ಮ ಪತ್ನಿ ಮೆಹರುನ್ನಿಸಾ ವಾಸಿಸುತ್ತಿದ್ದ ಮನೆಯಲ್ಲಿ ಘಟನೆ ನಡೆದಿರುವುದಾಗಿ ತಿಳಿಸಿದರು. ಇಸ್ಮಾಯಿಲ್ ಮಸೀದ್ ಸಮೀಪದ ಡಿಶ್ ಖದೀರ್ ಅವರ ಮನೆಯನ್ನು ಬಾಡಿಗೆಗೆ ಪಡೆದು ಪತ್ನಿ ವಾಸಿಸುತ್ತಿದ್ದಾಳೆ ಎಂದರು.

ಏಪ್ರಿಲ್ 6ರಂದು ಮಧ್ಯರಾತ್ರಿ ಸುಮಾರು 1 ಗಂಟೆ ವೇಳೆಗೆ ಪತ್ನಿಯ ಮನೆಗೆ ಭೇಟಿ ನೀಡಿದಾಗ ದಾನೀಷ್ ಎಂಬ ವ್ಯಕ್ತಿ ಮನೆಯಲ್ಲಿ ಅಕ್ರಮವಾಗಿ ಪ್ರವೇಶಿಸಿದ್ದನ್ನು ಕಂಡಿದ್ದಾಗಿ ಆರೋಪಿಸಿದರು. ಈ ಕುರಿತು ಈಗಾಗಲೇ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ ಎಂದು ತಿಳಿಸಿದರು.

''ಆ ವ್ಯಕ್ತಿಯನ್ನು ಇಲ್ಲಿಗೆ ಯಾಕೆ ಬಂದಿದ್ದೀಯೆ ಎಂದು ಪ್ರಶ್ನಿಸಿದಾಗ ಅವಾಚ್ಯ ಪದಗಳಿಂದ ನಿಂದಿಸಿ, ನಿನ್ನ ಹೆಂಡತಿಯನ್ನು ಕೇಳು ಎಂದು ಅವಹೇಳನಕಾರಿ ಮಾತುಗಳನ್ನು ಆಡಿದನು. ಬಳಿಕ ಪುನಃ ಪ್ರಶ್ನಿಸಿದಾಗ ನಿನ್ನನ್ನು ಕೊಂದುಬಿಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದನು'' ಎಂದು ಅವರು ಹೇಳಿದರು.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಯ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕು ಎಂದು ಅವರು ಪೊಲೀಸ್ ಇಲಾಖೆಯನ್ನು ಆಗ್ರಹಿಸಿದರು.

ಹಟ್ಟಿ ಪಟ್ಟಣದಲ್ಲಿ ಪಶು ಚಿಕಿತ್ಸಾ ಕೇಂದ್ರ ಮತ್ತು ಹೋಬಳಿ ಕೇಂದ್ರಗಳನ್ನು ತೆರೆಯಲು ಬಯ್ಯಾಪುರ ಮನವಿ

ಲಿಂಗಸುಗೂರು, ಏ.17–

ಚಿನ್ನದ ನಾಡು ಹಟ್ಟಿ ಪಟ್ಟಣಕ್ಕೆ ತಕ್ಷಣ ಪಶು ಚಿಕಿತ್ಸಾ ಕೇಂದ್ರವನ್ನು ಮಂಜೂರು ಮಾಡಬೇಕು, ಮತ್ತು ಹಟ್ಟಿ, ಮಾವಿನಭಾವಿ, ನಾಗರಹಾಳ, ಆನೆಹೊಸೂರ ಗ್ರಾಮಗಳನ್ನು ಹೋಬಳಿ ಕೇಂದ್ರವನ್ನಾಗಿ ಮಾಡಲು ಒತ್ತಾಯಿಸಿ ಸಂಬಂದಿಸಿದ ಸಚಿವರಿಗೆ ರಾಯಚೂರು ಮತ್ತು ಕೊಪ್ಪಳ ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪುರ ಪತ್ರದ ಮೂಲಕ ಒತ್ತಾಯಿಸಿದರು.



ಚಿನ್ನದ ನಿಕ್ಷೇಪ ಹೊಂದಿರುವ ಹಟ್ಟಿ ಪಟ್ಟಣದಲ್ಲಿ ಸುಮಾರು 40 ಸಾವಿರಕ್ಕೂ ಅಧಿಕ ಜನಸಂಖ್ಯೆ ವಾಸಿಸುತ್ತಿದೆ, ಸುಮಾರು 7-8 ಸುತ್ತಮುತ್ತಲಿನ ಹಳ್ಳಿಯ ರೈತರು ತಮ್ಮ ಜಾನುವಾರುಗಳನ್ನು ಚಿಕಿತ್ಸೆ ಗಾಗಿ ಹಟ್ಟಿಯಿಂದ 8 ಕಿ.ಮೀ. ದೂರದಲ್ಲಿರುವ ಗೆಜ್ಜಲಗಟ್ಟಾಕ್ಕೆ ಗ್ರಾಮಕ್ಕೆ ತೆಗೆದುಕೊಂಡು ಹೋಗಬೇಕಾಗುತ್ತದೆ ಈ ಕುರಿತು ತಮ್ಮ ಕಾರ್ಯಾಲಯಕ್ಕೆ ಎರಡು ಬಾರಿ ಪತ್ರಗಳನ್ನು ಕೊಟ್ಟಿದ್ದರೂ, ಸ್ಪಂದನೆಯಾಗಿರುವುದಿಲ್ಲ. ಇದು ರೈತರ ಬಹುದಿನಗಳ ಬೇಡಿಕೆಯಾಗಿರುವುದರಿಂದ ತಾವುಗಳು ಹಟ್ಟಿ ಪಟ್ಟಣಕ್ಕೆ ಒಂದು

4 ನೇ ಪುಟಕ್ಕೆ...

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ ಅಚ್ಚುಕಟ್ಟಾಗಿ ಜಯಂತಿ ಆಚರಿಸಬೇಕು - ಅಶೋಕಪವಾರ



ಸಿರವಾರ.ಏ.17- ವಿಶ್ವ ಜ್ಯೋತಿ ಬಸವೇಶ್ವರ, ಶಂಕರಾಚಾರ್ಯರು, ಭಗೀರತ ಮತ್ತು ಗೌತಮ ಬುದ್ದರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು, ನಿರ್ಲಕ್ಷ್ಯ ವಹಿಸಿದರೆ ಕ್ರಮಕೈಗೊಳಲಾಗುವುದು ಎಂದು ತಹಸೀಲ್ದಾರ ಅಶೋಕಪವಾರ ಹೇಳಿದರು. ಪಟ್ಟಣದ ತಹಸೀಲ್ದಾರ ಕಛೇರಿಯಲ್ಲಿ ವಿವಿಧ ಜಯಂತಿ ಪೂರ್ವಭಾವಿ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿದ ಅವರು ಏಪ್ರೀಲ್ 20 ಜಗಜ್ಯೋತಿ ಬಸವೇಶ್ವರ ಜಯಂತಿ ಇದೆ. ಅಂದು ಬೆಳಗ್ಗೆ ಎಲ್ಲಾ ಸರ್ಕಾರಿ ಶಾಲೆ, ಕಾಲೇಜು, ಕಛೇರಿಗಳಲ್ಲಿ ಸರಳವಾಗಿ ಆಚರಣೆ ಮಾಡಿ, ಸಂಜೆ ಬಾವಚಿತ್ರ ಮೆರವಣಿಗೆ, ವೇದಿಕೆ ಕಾರ್ಯಕ್ರಮ, ಉಪನ್ಯಾಸ ಪ್ರತಿಭಾವಂತ ವಿದ್ಯಾರ್ಥಿ ಸನ್ಮಾನ ಜರುಗುವುದು. 21-04-2026 ರಂದು ಶಂಕರಾಚಾರ್ಯ ಜಯಂತಿ, 23-04-2026 ರಂದು

ಶ್ರೀ ಭಗೀರಥ ಜಯಂತಿ, 01-05-2026 ರಂದು ಭಗವಾನ ಬುದ್ದ ಜಯಂತಿ ಇದೆ. ಎಲ್ಲಾ ಕಛೇರಿಯಲ್ಲಿ, ಶಾಲೆ, ಕಾಲೇಜುಗಳಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಾದಕರಿಗೆ ಸನ್ಮಾನ, ವೃತ್ತಗಳಿದರೆ, ನಾಮಫಲಗಳಿದರೆ ಸಿಂಗರಿಸಬೇಕು. ಅದ್ದೂರಿಯಾಗಿ ಆಚರಣೆ ಮಾಡಬೇಕೆಂದರೆ ಸಮಾಜದವರ ಸಹಕಾರ ಅತ್ಯಗತ್ಯ ಎಂದರು. ಈ ಸಂದರ್ಭದಲ್ಲಿ ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ, ಗ್ರೇಡ್ 2 ತಹಸೀಲ್ದಾರ ಅಬ್ದಲ್ ವಾಹೀದ್, ಕವಿತಾಳ ಪ.ಪಂಚಾಯತಿ ಮುಖ್ಯಾಧಿಕಾರಿ ಜಸ್ವಂತ್ ಸಿಂಗ್, ಜೇಸ್ಕಾಂ ಇಲಾಖೆಯ ಮೋಹನ್ ಸಿಂಗ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರೇಣುಕಾ, ಶಿರಸ್ತೆದಾರ

4 ನೇ ಪುಟಕ್ಕೆ...

ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ ಸದಸ್ಯರಿಂದ ವಿವಿಧ ಕಡೆ ಭೇಟಿ; ಪರಿಶೀಲನೆ



ರಾಯಚೂರು,ಏ.16–

ರಾಯಚೂರು ಜಿಲ್ಲೆಯಲ್ಲಿ ಪ್ರವಾಸದಲ್ಲಿರುವ ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ ಸದಸ್ಯರಾದ ಜಟೋತು ಹುಸೇನ್ ಅವರು ಏಪ್ರಿಲ್ 16ರ ಗುರುವಾರ ದಂದು ರಾಯಚೂರಿನ ವಿವಿಧ ಕಡೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಮೊದಲಿಗೆ ರಾಯಚೂರು ನಗರದ ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಆಸ್ಪತ್ರೆಯಲ್ಲಿನ ಸೌಕರ್ಯಗಳ ಬಗ್ಗೆ ಖುದ್ದು ಪರಿಶೀಲಿಸಿ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಉತ್ತಮ ಗುಣಮಟ್ಟದದಿಂದ ಚಿಕಿತ್ಸೆ ನೀಡಬೇಕು. ಸರ್ಕಾರದ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿಯನ್ನು ನೀಡಬೇಕು. ಹಾಗೂ ಚಿಕಿತ್ಸೆ ಗಳ ಮಾಹಿತಿಯನ್ನು ನಾಮಫಲಕದಲ್ಲಿ ಪ್ರದರ್ಶನ ಮಾಡಬೇಕು. ಅಲ್ಲದೆ ಆಸ್ಪತ್ರೆಗೆ ಒಳಗೆ ಹಾಗೂ ಹೊರಗಡೆ ಸ್ವಚ್ಛತೆಯನ್ನು ಕಾಪಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ ಆಸ್ಪತ್ರೆಯ ವಿವಿಧ ವಿಭಾಗದ ವಾರ್ಡ್9 ಗಳಿಗೆ ಭೇಟಿ ನೀಡಿ, ರೋಗಿಗಳ ಅಹವಾಲು ಆಲಿಸಿ, ತಾಯಿ ಮತ್ತು ಮಕ್ಕಳ ವಿಭಾಗದಲ್ಲಿ ಎಸಿ ಅಳವಡಿಸಬೇಕು. ಆಸ್ಪತ್ರೆಗೆ ಬರುವ ರೋಗಿಗಳ ಸಂಬಂಧಿಕರಿಗೆ ಕುಳಿತ ಊಟ ಮಾಡಲು ಛತ್ರದ ವ್ಯವಸ್ಥೆ ಮಾಡಲು ಆಯೋಗದಿಂದ ಆರ್ಥಿಕ ನೆರವು ನೀಡಲಾಗುವುದು. 15ದಿನಗ ಒಳಗಾಗಿ ವರದಿ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿವಿಧ ವಸತಿ ನಿಲಯಗಳಿಗೆ ಭೇಟಿ: ರಾಯಚೂರು ನಗರದ ವಡವಟ್ಟಿ ಹಾಗೂ ಅಸ್ಕಿಹಾಳಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ, ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳನ್ನು ಪರಿಶೀಲಿಸಿದರು.ವಸತಿ ನಿಲಯಗಳಿಗೆ ಪೂರೈಕೆಯಾಗುವ ಆಹಾರ ಧಾನ್ಯಗಳು ಮತ್ತು ಅದರ ಗುಣಮಟ್ಟದಲ್ಲಿ ಯಾವುದೇ ರೀತಿಯ ವ್ಯತ್ಯಾಸವಾಗಬಾರದು. ಕಡ್ಡಾಯವಾಗಿ ಬಯೋಮೆಟ್ರಿಕ್‌ನಲ್ಲಿನ ಮಕ್ಕಳ ಹಾಜರಾತಿಯನ್ನೇ ಪರಿಗಣನೆಗೆ ಪಡೆಯಬೇಕು. ರಿಜಿಸ್ಟರನಲ್ಲಿನ ಹಾಜರಾತಿಗೂ ಬಯೋಮೆಟ್ರಿಕನಲ್ಲಿ

4 ನೇ ಪುಟಕ್ಕೆ...

ಬಿಎಸ್‌ಎನ್‌ಎಲ್ ಪಿಂಚಣಿದಾರರಿಗೆ ತುಟ್ಟಿ ಪರಿಹಾರ ವಿಳಂಬ: ಪ್ರತಿಭಟನೆ

ರಾಯಚೂರು,ಏ.16–

ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್ ಸಂಸ್ಥೆಗಳಿಂದ ನಿವೃತ್ತರಾದ ಪಿಂಚಣಿದಾರರಿಗೆ ತುಟ್ಟಿ ಪರಿಹಾರ (ಡಿಆರ್) ನೀಡುವಲ್ಲಿ ವಿಳಂಬವಾಗಿರುವುದನ್ನು ಖಂಡಿಸಿ ಅಖಿಲ ಭಾರತ ಬಿಎಸ್‌ಎನ್‌ಎಲ್ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುವಾರ ಬಿಎಸ್‌ಎನ್‌ಎಲ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.



ಪ್ರತಿಭಟನೆಯಲ್ಲಿ ಪಾಲ್ಗೊಂಡ ಪಿಂಚಣಿದಾರರು, ಫೆಬ್ರವರಿ 27ರಂದು ಹೊರಡಿಸಲಾದ ಡಿಪಿಇ ಆದೇಶವನ್ನು ತಕ್ಷಣ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಗ್ರಾಹಕ ಬೆಲೆ ಸೂಚ್ಯಂಕದ ಆಧಾರದಲ್ಲಿ ಪ್ರತಿ ತ್ರೈಮಾಸಿಕದಲ್ಲಿ ಕೈಗಾರಿಕಾ ತುಟ್ಟಿ ಭತ್ಯೆ ಪರಿಷ್ಕರಣೆ ಮಾಡುವ ಪದ್ಧತಿ ಇದ್ದರೂ, ಈ ಬಾರಿ ಅನಗತ್ಯ ವಿಳಂಬವಾಗಿರು ವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

1997, 2007 ಹಾಗೂ 2017ರ ವೇತನ ಮಾಪಕಗಳ ಅಡಿಯಲ್ಲಿ ಸಿಪಿಎಸ್‌ಇ ಉದ್ಯೋಗಿಗಳಿಗೆ ಜನವರಿ 1ರಿಂದ ಅನ್ವಯವಾಗುವ ಐಡಿಎ ದರಗಳನ್ನು ನಿಗದಿಪಡಿಸಲಾಗಿದೆ. 2007ರ ವೇತನ ಮಾಪಕಕ್ಕೆ ಅನುಗುಣವಾಗಿ ಡಿಒಟಿ (ಐಡಿಎ) ಪಿಂಚಣಿದಾರರು ಡಿಆರ್ ಹೆಚ್ಚಳಕ್ಕೆ ಅರ್ಹರಾಗಿದ್ದಾರೆ. ಆದಾಗ್ಯೂ, ಸಂಬಂಧಿತ ದೂರಸಂಪರ್ಕ ಇಲಾಖೆ ಇನ್ನೂ ಆದೇಶ ಜಾರಿಗೆ ತರದಿರುವುದು ಲಕ್ಷಾಂತರ ಪಿಂಚಣಿದಾರರಲ್ಲಿ ಆತಂಕ ಮೂಡಿಸಿದೆ ಎಂದು ತಿಳಿಸಿದರು.

ದೇಶಾದ್ಯಂತ ಸುಮಾರು 4

4 ನೇ ಪುಟಕ್ಕೆ...



ಯುವಕರು ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ವಹಿಸಲಿ - ಕೆ.ಸೋಮಶೇಖರ

ಕೊಪ್ಪಳ: ಯುವಕರು ಹೆಚ್ಚು ಹೆಚ್ಚು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ತಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಸದೃಢಪಡಿಸಿಕೊಳ್ಳಬೇಕೆಂದು ಕಾಂಗ್ರೆಸ್ ಪಕ್ಷದ ಯುವ ಧುರೀಣರು, ಸಮಾಜ ಸೇವಕರೂ ಆದ ಕೆ.ನಾಗರಾಜ ಅವರ ಪುತ್ರ ಕೆ.ಸೋಮಶೇಖರ ಅವರು ಕರೆ ನೀಡಿದರು.

ಶಹಪುರ ಗ್ರಾಮದಲ್ಲಿ ಗೋಂಧಳಿ ಸಮಾಜದ ಯುವಕರ ಪಡೆ ಆಯೋಜಿಸಿದ್ದ ಎಸ್.ಪಿ.ಎಲ್. - ಶಹಪುರ ಪ್ರೀಮಿಯರ್ ಲೀಗ್ -2026 ರ ಕ್ರಿಕೆಟ್ ಪಂದ್ಯಾವಳಿಗಾಗಿ ಆಕ್ಷನ್ ಗೆ ಚಾಲನೆ ನೀಡಿ ಮಾತನಾಡಿದ ಅವರು, 12 ತಂಡಗಳ ಕ್ರೀಡಾಪಟುಗಳಿಗೆ ಪ್ರೋತ್ಸಾಹವಾಗಿ ಜೆರ್ಸಿ ನೀಡಿದರು. ಯುವಕ, ಯುವತಿಯರು ಕೇವಲ ಕ್ರಿಕೆಟ್ ಮಾತ್ರವಲ್ಲ ಕಬ್ಬಡ್ಡಿ, ವಾಲಿಬಾಲ್, ಖೋಖೋ, ಶಟಲ್ ಕಾಕ್ ಯಾವು ದೇ ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಅಗತ್ಯ ನೆರವು ನೀಡುವುದಾಗಿ ಹೇಳಿದರು. ಭವಿಷ್ಯದಲ್ಲಿ ಕೊಪ್ಪಳ ಜಿಲ್ಲೆಯ ಎಲ್ಲ ಕ್ರೀಡಾಪಟುಗಳಿಗೆ ಉತ್ತೇಜನಾತ್ಮಕವಾಗಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಮಾದರಿಯಲ್ಲಿ ಜಿಲ್ಲಾ ಕೇಂದ್ರವಾದ ಕೊಪ್ಪಳ ನಗರದಲ್ಲಿ ಕ್ರೀಡಾ ಮೈದಾನ ನಿರ್ಮಿಸುವ ಕನಸು ಇದೆ ಎಂದು ಕ್ರೀಡೆಗೆ ತಮಗಿರುವ ಒಲವನ್ನು ವ್ಯಕ್ತಪಡಿಸಿದರು.

ಇದೇವೇಳೆ ಗೋಂಧಳಿ ಸಮಾಜದ ಅಧ್ಯಕ್ಷರಾದ ವೀರಣ್ಣ ಜೋಷಿ ಮತ್ತು ಎಲ್ಲ ಪದಾಧಿಕಾರಿಗಳು ಕೆ.ಸೋಮಶೇಖರ್ ಅವರಿಗೆ ಸನ್ಮಾನಿಸಿ ಗೌರವಿಸಿದರು. ಬಳಿಕ ತಂಡಗಳ ಆಕ್ಷನ್ ಪ್ರಕ್ರಿಯೆ ನಡೆಯಿತು. ಶಹಪುರ ಪ್ರೀಮಿಯರ್ ಲೀಗ್ - 2026 ನ ಉಸ್ತುವಾರಿಗಳಾದ ಅಭಿಷೇಕ್ ಎನ್.ಸಿಂಧೆ, ಪ್ರವೀಣ್ ಟಿ.ವಾಕೋಡೆ, ಸತೀಶ್ ಪಿ.ಗೋಗರೆ, ಮೇಘರಾಜ್ ಪಿ.ವಾಕೋಡೆ, ಸಂತೋಷ್ ಕೆ.ಗೋಗರೆ, ಉದಯ್ ಸಿಂಧೆ, ಮಹಾಂತೇಶ್, ಕೃಷ್ಣ ಮತ್ತು ಅಣ್ಣಪ್ಪ ಗೋಗರೆ ಅವರು ಈ ಕಾರ್ಯಕ್ರಮವನ್ನು ಆಯೋಜಿ ಸಿದ್ದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ನಿಂಗಪ್ಪ ಚೌಧರಿ, ಗೋಂಧಳಿ ಸಮಾಜದ ಹಿರಿಯರಾದ ಕೋಳೂರಪ್ಪ ಗೋಗರೆ, ಮಾರ್ಕಂಡೆಪ್ಪ ಗೋಗರೆ, ಹಿರಿಯ ಧುರೀಣರಾದ ಎಸ್.ಎಚ್.ಕಿನ್ನಾಳ್, ಪುಂಡಲೀಕಪ್ಪ ವಾಕೋಡೆ, ಮಲ್ಲೇಶ್ ಗೋಗರೆ, ಸುಭಾಷ್ಚಂದ್ರ ವಾಕೋಡೆ, ದೇವಣ್ಣ ಗೋಗರೆ, ಲಕ್ಷ್ಮಣ ವಾಕೋಡೆ, ಪ್ರಾಚಾರ್ಯರಾದ ಡಾ.ದಯಾನಂದ್ ಕಿನ್ನಾಳ್, ರಮೇಶ್ ಸಿಂಧೆ, ಕೃಷ್ಣ ಭೋರಾತ್, ತುಕಾರಾಮ್ ವಾಕೋಡೆ, ಯಮುನಪ್ಪ ನಾಯ್ಕಲ್, ಬಸವರಾಜ ರೇಣಿಕೆ, ಮಂಜು ಕೆ.ಜೋಷಿ, ಪ್ರಭು ನಾಯ್ಕಲ್, ರವಿ ಕೃಷ್ಣ ನಾಯ್ಕಲ್ ಸೇರಿದಂತೆ ಗೋಂಧಳಿ ಸಮುದಾಯದ ಅನೇಕ ಹಿರಿಯರು, ಯುವಕರು ಮತ್ತು ಕ್ರೀಡಾಭಿ ಮಾನಿಗಳು ಇದ್ದರು. ಕಾರ್ಯಕ್ರ ಮದ ನಿರ್ವಹಣೆಯನ್ನು ಪತ್ರಕರ್ತ ರಾದ ಮಲ್ಲಿಕಾರ್ಜುನ ವಿ.ಜೋಷಿ ಅವರು ನಡೆಸಿಕೊಟ್ಟರು.

ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸೋಣ-ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ



ಬೀದರ,ಏ.16- ಏಪ್ರಿಲ್.21 ರಂದು ಬರುವ ಶಂಕರಾಚಾರ್ಯರರ ಜಯಂತಿ ಹಾಗೂ ಏಪ್ರಿಲ್.23 ರಂದು ಬರುವ ಭಗೀರಥ ಮಹರ್ಷಿಯವರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ತಿಳಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಏಪ್ರಿಲ್.21 ರಂದು ಬರುವ ಶಂಕರಾಚಾರ್ಯರರ ಜಯಂತಿ ಹಾಗೂ ಏಪ್ರಿಲ್.23 ರಂದು ಬರುವ ಭಗೀರಥ ಮಹರ್ಷಿಯವರ ಜಯಂತಿಗಳ ಆಚರಣೆ ಕುರಿತು ಕರೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದಿನಾಂಕ: 21-04-2026 ರಂದು ಶಂಕರಾಚಾರ್ಯರರ ಜಯಂ ತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬೆಳಿಗ್ಗೆ 10 ಗಂಟೆಗೆ ಪೂಜೆ ಸಲ್ಲಿಸುವುದು, ಸಾಯಂಕಾಲ 4 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮದಿರದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ದಿನಾಂಕ: 23-04-2026 ರಂದು ಎಲ್ಲ ಸರಕಾರಿ, ಅರೆ ಸರಕಾರಿ ಸಂಘ-ಸಸ್ಥೆಗಳಲ್ಲಿ ಬೆಳಿಗ್ಗೆ 8.30 ಗಂಟೆಗೆ ಭಗೀರಥ ಮಹರ್ಷಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ 9 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಗೀರಥ ಮಹರ್ಷಿಯವರ ಭಾವಚಿತ್ರಕ್ಕೆ ಪೂಜೆ ಭಾಗವಹಿಸುವುದು. 10 ಗಂಟೆಗೆ ಛತ್ರಪತಿ ಶಿವಾಜಿ ವೃತ್ತದಿಂದ ಭಗಿರಥ ಮಹರ್ಷಿಯವರ ಭಾವಚಿತ್ರದ ಮೆರವಣಿಗೆ ಪ್ರಾರಂಭಗೊಂಡು ಕರಿಯಪ್ಪ ವೃತ್ತ, ಭಗವಂತಸಿಗ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ, ಕರಿಯಪ್ಪ ವೃತ್ತದಿಂದ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮ ದಿರದಲ್ಲಿ ಮುಕ್ತಾಯಗೊಂಡು 11 ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಕಲಾ ತಂಡಗಳ ವ್ಯವಸ್ಥೆ, ಅಂದು ನಗರ ಸಭೆ ವತಿಯಿಂದ ಎಲ್ಲ ಮಹನೀಯರ ವೃತ್ತಗಳ ಮೇಲೆ ದೀಪಾಲಂಕಾರ, ಕುಡಿಯುವ ನೀರಿನ ವ್ಯವಸ್ಥೆ, ಪ್ರಮುಖ ವೃತ್ತಗಳ ಸ್ವಚ್ಛತೆ ಮಾಡುವುದು, ಪೊಲೀಸ್ ಇಲಾಖೆ ವತಿಯಿಂದ ಮೆರವಣಿಗೆ ಹೋಗುವ ಮಾರ್ಗದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ ಮಾಡುವಂತೆ ಸೂಚಿಸಿದರು.

ಈ ಸಭೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಶಿಂಧೆ, (ವೆಂಕಟಸಿಗ ಕುಲಕರ್ಣಿ) ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಅಧ್ಯಕ್ಷರಾದ ರಮೇಶ ಸ್ರ್ ದೇವಿದಾಸ ಜೋಶಿ, ಸತೀಶ ಕುಲಕರ್ಣಿ,

ಮನೋಹರ ದಂಡೆ, ಮಹೇಶ ಪತಗಿ, ರಾಜೇಶ ಕುಲಕ ರ್ಣಿ, ಸುನೀಲಕುಮಾರ ಕುಲಕರ್ಣಿ, ಭಗಿರತ ಮಹರ್ಷಿ ಸಮಾಜದ ತಾನಾಜಿ ಸಗರ, ಜಗನ್ನಾಥ ಆಲಗೋಲ, ಜಗನ್ನಾಥ ಉಪ್ಪಾರ, ಬಸವರಾಜ ಬೆಲೂರ, ರಾಜಕುಮರ ಟಿಲೇಕರ, ಸುಭಾಷ ಹಮೀಲಾಪೂರ ಸೇರಿದಂತೆ ಜಿಲ್ಲಾ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಭೀಕರ ಅಪಘಾತ: ಮೂವರ ಸಾವು

ಸೇಡಂ,ಏ.16-ತಾಲೂಕಿನ ಕೊಂಕನಹಳ್ಳಿ ಹಾಗೂ ಶೆಟ್ಟಿ ಹೂಡಾ ಗ್ರಾಮಗಳ ಮಧ್ಯದ ರಾಜ್ಯ ಹೆದ್ದಾರಿಯಲ್ಲಿ ಲಾರಿಗೆ ಎರಡು ದ್ವಿಚಕ್ರ ವಾಹನಗಳು ಡಿಕ್ಕಿಯಾದ ಪರಿಣಾಮ ಮೂವರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ರಾತ್ರಿ 11:00ಗೆ ಸಂಭವಿಸಿದೆ.

ಮೃತರನ್ನು ಸೇಡಂನ ಸಂಜು (28) ಮತ್ತು ಕಾಶಿನಾಥ (18) ಹಾಗೂ ಮಳಖೇಡದ ಮಹೇಶ (33) ಎಂದು ಗುರುತಿಸಲಾಗಿದೆ. ಸೇಡಂ ಪೆಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.



ಅಲ್ಲೀಪುರ: ಕಂಪಿಲರಾಯ ಗಿರಿಜನ ಪ್ರೌಢ ಶಾಲೆಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ಬಳ್ಳಾರಿ,ಏ.15:ನಗರದ ಹೊರವಲಯದ ಅಲ್ಲೀಪುರದಲ್ಲಿರುವ ಶ್ರೀ ವಾಲ್ಮೀಕಿ ಗುರುಕುಲಾಶ್ರಮದ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಕಂಪಿಲರಾಯ ಗಿರಿಜನ ಪ್ರೌಢಶಾಲೆಯಲ್ಲಿ ಮಂಗಳವಾರ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು.

ಶಾಲಾ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗಣ್ಯರು ಗೌರವ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಅಧ್ಯಕ್ಷ ಎನ್.ಕೆ. ಸದಾಶಿವಪ್ಪ ಅವರು ಮಾತನಾಡಿ, ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶದ ಸಮಾನತೆಗಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟ ಮಹಾನ್ ಚೇತನ. ಅವರ ತತ್ವಗಳು ಇಂದಿಗೂ ನಮಗೆ ದಾರಿದೀಪವಾಗಿವೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಬಿ.ರುದ್ರಪ್ಪ, ನಿಕಟಪೂರ್ವ ಅಧ್ಯಕ್ಷ ಬಿ.ಜಯರಾಂ ಸೇರಿದಂತೆ ಆಡಳಿತ ಮಂಡಳಿಯ ಸರ್ವ ಸದಸ್ಯರು, ಶಾಲೆಯ ಮುಖ್ಯಗುರುಗಳು, ಸಹ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನಿಸ್ವಾರ್ಥ ಸೇವೆಯೇ ಎನ್.ಎಸ್.ಎಸ್.ನ ಮುಖ್ಯ ಉದ್ದೇಶ: ಡಾ.ಶಾಂತಾ ಅಷ್ಟಿಗ

ಜೇವರ್ಗಿ, ಏ.16- ನಿಸ್ವಾರ್ಥ ಸೇವೆಯನ್ನು ಮಾಡುವುದೇ ಎನ್.ಎಸ್.ಎಸ್, ನ ಮುಖ್ಯ ಉದ್ದೇಶವೆಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಾಂತಾ ಬಿ ಅಷ್ಟಿಗೆ ಅವರು ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಜೇವರ್ಗಿ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ಅವರ ಸಯೋಗದಲ್ಲಿ ಆಯೋಜಿಸಿದ 2025 , 26ನೇ ಶೈಕ್ಷಣಿಕ ಸಾಲಿನ ಎನ್.ಎಸ್.ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಬಿರಾರ್ಥಿಗಳು ಶ್ರಮದಾನ ಮಾಡುವುದರ ಮುಖಾಂತರ ನಿಸ್ವಾರ್ಥವಾಗಿ ಸೇವೆ ಮಾಡಬೇಕೆಂದು ಕರೆ ನೀಡಿದರು.

ನಿಸ್ವಾರ್ಥ ಸೇವೆ ಮಾಡುವುದೇ ಎನ್.ಎಸ್.ಎಸ್ ನ ಪ್ರಮುಖ ಉದ್ದೇಶವಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮ ದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ಸುಜಾತಾ ಪಾಟೀಲ್. ಶ್ರೀಮತಿ ಸಾವಿತ್ರಿ ಮೇಲಿನಕೇರಿ ಡಾ. ಖಾಜಾವಲಿ ಈಚನಾಳ್ ಮಾತನಾಡಿದರು ಶಿಬಿರಾರ್ಥಿಗಳು ಒಂದು ವಾರಗಳ ಕಾಲ ನಡೆದ ಎಲ್ಲಾ ಚಟುವಟಿಕೆಗಳ ಬಗ್ಗೆ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದರು.

ಬಸವರಾಜಪ್ಪ ಗೌಡ ಪಾಟೀಲ್ ಮುಖಂಡರು ಕೆಲ್ಲೂರು ಗ್ರಾಮ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ವಿಜೇತ ತಂಡದ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ಕೂಡ ವಿತರಿಸಲಾಯಿತು.

ಕಸದಿಂದ ರಸ ಎನ್ನುವ ಹಾಗೆ ಎನ್.ಎಸ್.ಎಸ್ ಶಿಬಿರಾರ್ಥಿಗಳು ಶಿಬಿರದಲ್ಲಿ ಬಹಳ ಆಸಕ್ತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಡಾ. ಶರಣಪ್ಪ ಗುಂಡಗುರ್ತಿ ಶ್ರೀ. ಕುಪೇಂದ್ರ ಕುಮಾರಿ ಅಪರ್ಣ ಹಾಜರಿದ್ದರು ಕಾಲೇಜಿನ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು, ಕುಮಾರ ವಿಶ್ವನಾಥ್ ನಿರೂಪಿಸಿದರು. ಡಾ. ಶರಣಪ್ಪ ಗುಂಡಗುರ್ತಿ ಸ್ವಾಗತ ಮಾಡಿದರು. ಡಾ.ರಾಮುಲು ಎಲ್ಲರನ್ನು ವಂದಿಸಿದರು

ಕಲಬುರಗಿ ರಂಗಾಯಣವು ಸಾಂಸ್ಕೃತಿಕ ಕ್ಷೇತ್ರಕ್ಕೆ ಒಂದು ಕೊಡುಗೆ:ಡಾ.ಸ್ವಾಮಿರಾವ ಕುಲಕರ್ಣಿ

ಕಲಬುರಗಿ,ಏ.15-ಕಲಬುರಗಿ ರಂಗಾಯಣವು ಸಾಂಸ್ಕತಿಕ ಕ್ಷೇತ್ರಕ್ಕೆ ಒಂದು ಕೊಡುಗೆಯಾಗಿದೆ ಮನೆಯ ಮೊದಲ ಪಾಠಶಾಲೆ ಮೊಟ್ಟ ಮೊದಲು ಮನೆಗಳಿಂದ ಮೌಲ್ಯಗಳನ್ನು ಪ್ರಾರಂಭವಾಗುತ್ತವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿಯ ಕರ್ನಾಟಕ ರಾಜ್ಯಾದ್ಯಂತ ಕಲಬುರಗಿ ರಂಗಾಯಣ ಕೊಡುಗೆ ಅಪಾರವಾಗಿದೆ 20-25 ವರ್ಷದ ಮಕ್ಕಳು ಹೃದಯಘಾತಕ್ಕೆ ಬಲಿಯಾಗುತ್ತಿದ್ದಾರೆ. ಇದಕ್ಕೆ ಕಾರಣ ಮಕ್ಕಳ ಮೇಲೆ ಶಿಕ್ಷಣದ ಒತ್ತಡ ಇದಕ್ಕೆ ಮುಖ್ಯ ಕಾರಣ ಮಕ್ಕಳ ಬೇಸಿಗೆ ಶಿಬಿರವನ್ನು ಹೇಗೆ ಏರ್ಪಡಿಸುತ್ತೇವೊ ಹಾಗೆ ಶಿಬಿರವನ್ನು ಏರ್ಪಡಿಸಬೇಕು ಒತ್ತಡದಿಂದ ಒಳಗಾದ ನಾವು ಹೇಗೆ ಒತ್ತಡದಿಂದ ಹೊರ ಬರಬೇಕು ಎಂಬುದು ನಮ್ಮ ಕೈಯಲ್ಲಿದೆ ಅದನ್ನು ಕಲಿತುಕೊಳ್ಳಬೇಕು ಮಕ್ಕಳಿಗೆ ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯಶಿವ ಮುಂತಾದ ಹಾಡುಗಳನ್ನು ಕಲಸಿ ಎಂದು ಹಿರಿಯ ಸಾಹಿತಿ ಡಾ.ಸ್ವಾಮಿರಾವ ಕುಲಕರ್ಣಿ ಹೇಳಿದರು.

ಏ.12 ರಂದು ರಂಗಾಯಣದಲ್ಲಿ ಆಯೋಜಿಸಿದ್ದ ಮಕ್ಕಳ ಹಬ್ಬ-2026, ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಹಾಗೂ ಕಾಲಚಕ್ರ ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು



ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣಬಸವ ವಿಶ್ವವಿದ್ಯಾಲ ಯದ ಕುಲಸಚಿವರಾದ ಡಾ.ಲಕ್ಷ್ಮಿಪಾಟೀಲ ಮಾಕಾ ಅವರು ಮಾತನಾಡಿ, ತಮ್ಮ ಕೆಲಸದ ಒತ್ತಡದಲ್ಲಿ ಮಕ್ಕಳನ್ನು ಟಿವಿ ನೋಡಲು ಹೇಳುತ್ತಿದ್ದಾರೆ ಅಥವಾ ಮಕ್ಕಳ ಕೈಗೆ ಒಟ ಕೊಡುತ್ತಿದ್ದಾರೆ ಆದ್ದರಿಂದ ಒಟ ಅಡಿಕ್ಟ್ ಅಗಿದ್ದಾರೆ ಮಕ್ಕಳಿಗೆ ಒಟ ನೋಡುವ ಹವ್ಯಾಸ ಬಿಡಿಸಲು ಈ ತರಹದ ಶಿಬಿರಕ್ಕೆ ಮಕ್ಕಳನ್ನು ಕಳುಹಿಸಿ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು,ಇಂತಹ ಶಿಬಿರದಲ್ಲಿ ಪಾಲ್ಗೊಂಡರೆ ಮಕ್ಕಳಲ್ಲಿ ವೇದಿಕೆ ಮೇಲೆ ಹತ್ತುವ ಧೈರ್ಯ ಬರುತ್ತದೆ, ಮನೋರಂಜನೆ ಸಿಗುತ್ತದೆ ಎಂದು ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿ ರಾಯಚೂರು ಕವಿವಿ ಸಹಾಯಕ ಪ್ರಾಧ್ಯಾಪಕ ಡಾ.ರಾಜಶೇಖರ ಬಸವನಾಯಕ ಅವರು ಮಾತನಾಡಿ, ಪ್ರಸ್ತುತ ಈಗಿನ ಕಾಲದ ವಿದ್ಯಾರ್ಥಿಗಳು ಪದವಿ ಮುಗಿಸಿ 90-95 ಅಂಕಗಳನ್ನು ಪಡೆದರು ಸಹ 80% ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಒಂದು ನಿಮಿಷ ಮಾತನಾಡಲು ಬರುವುದಿಲ್ಲ, ವೇದಿಕೆ ಹತ್ತಲು ಧೈರ್ಯ ಮಾಡಲ್ಲ ಮಾತನಾಡುವ ಕಲೆ ಗೊತ್ತಿರುವುದಿಲ್ಲ. ಒಬ್ಬ ವಿದ್ಯಾರ್ಥಿ 15 ದಿನಗಳ ಹಿಂದೆ ರಾಜಸ್ಥನದ ವಿದ್ಯಾರ್ಥಿ ಒತ್ತಡದಿಂದ ಆತ್ಮಹತ್ಯ ಮಾಡಿಕೊಂಡಿದ್ದಾರೆ ಈ ನಾಟಕಗಳನ್ನು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಬೆಳೆಯುತ್ತದೆ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಮಾತನಾಡುವ ಕಲೆ ಗೊತ್ತಿಲ್ಲದಿರುವುದಿಲ್ಲ ನಾಟಕ ನೋಡುವುದರಿಂದ ಎಲ್ಲಾ ಕಲೆಗಳನ್ನು ಕಲಿತುಕೊಳ್ಳಬಹುದು ಎಂದರು.

ರಂಗಾಯಣ ನಿರ್ದೇಶಕರಾದ ಡಾ.ಸುಜಾತಾ ಜಂಗಮಶೆಟ್ಟಿ ಅವರು ಪ್ರಾಸ್ಥಾವಿಕವಾಗಿ ಮಾತನಾಡಿ, ಕಲಬುರಗಿ ರಂಗಾಯಣದಲ್ಲಿ ಮಕ್ಕಳ ಹಬ್ಬ- 2026 ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರ ಹಮ್ಮಿಕೊಳ್ಳಲು ಮುಖ್ಯಕಾರಣವೆಂದರೆ ಮಕ್ಕಳ ಮನಸಲ್ಲಿ ಅಡಗಿರುವ ಕಲೆಯನ್ನು ಹೊರತರುವ ಉದ್ದೇಶವಾಗಿದೆ

ನಮ್ಮ ರಂಗಾಯಣದಲ್ಲಿ ಮಕ್ಕಳ ಬೇಸಿಗೆ ಶಿಬಿರದ 120 ಅರ್ಜಿ ತೆಗೆದುಕೊಂಡು ಹೋಗಿದ್ದಾರೆ ಹಾಗೂ 80 ಮಕ್ಕಳು ಪ್ರವೇಶ ಪಡೆದಿದ್ದಾರೆ ಇನ್ನು ಪ್ರತಿ ದಿನ ಮಕ್ಕಳ ಪ್ರವೇಶ ಪಡೆಯುತ್ತಿದ್ದಾರೆ ಈಗಿನ ಪ್ರಪಂಚದಲ್ಲಿ ಮಕ್ಕಳ ಅಂಕದ ಬಗ್ಗೆ ಬೆನ್ನು ಹತ್ತಿರುವ ಮಕ್ಕಳು ಓದುವುದರ ಜೊತೆಗೆ ಇತರ ಪಠ್ಯೇತರ ಚಟುವಟಿಕೆಗಳ ಬಗ್ಗೆ ಗಮನ ಹರಿಸಿ ಎಂದು ತಿಳಿಸಿದ್ದಾರೆ ನಮ್ಮ ಮಕ್ಕಳ ಬೇಸಿಗೆ ರಂಗ ತರಬೇತಿ

ಶಿಬಿರದಲ್ಲಿ ಪಾಲ್ಗೊಂಡ ಅನೇಕ ಮಕ್ಕಳು ಅತ್ಯುತ್ತಮ ಅಂಕಗಳನ್ನು ಪಡೆಯುತ್ತಿದ್ದಾರೆ ನಾವು ಇಲ್ಲಿ ನಾಟಕ, ಡಿಣ ಈಟ ತೋರಿಸುತ್ತೇವೆ, ಕಲಿಸುವುದರ ಜೊತೆಗೆ ಗೀಗೀ ಪದ, ತತ್ವಪದ, ಡೊಳ್ಳು

ಕುಣಿತ, ತಮಟೆ ವಾದನ, ಹೆಜ್ಜೆ ಮೇಳ, ಲಂಬಾಣಿ ನೃತ್ಯ ಮಕ್ಕಳಿಗೆ ತೋರಿಸುತ್ತೇವೆ ಮುಂದೆ ಎಲ್ಲಾ ಮಕ್ಕಳ ಕಲಾವಿದರು ಆಗದೇ ಇರಬಹುದು ಆದರೆ ಪ್ರೇಕ್ಷಕರಂತು ಆಗೇ ಆಗುತ್ತಾರೆ. ದೊಡ್ಡ ದೊಡ್ಡ ಕಲಾವಿದರಿಗೆ, ಸಾಹಿತಿಗಳಿಗೆ, ರಂಗ ಭೂಮಿ ಕಲಾವಿದರಿಗೆ ಕರೆಸಿ ಮಕ್ಕಳ ಜೊತೆ ಮಾತನಾಡಿಸಿ ಕಥೆ ಹೇಳಿಸುತ್ತೇವೆ, ಮಕ್ಕಳೇ ಕಥೆ ಹೇಳೋ ರೀತಿ ಮಾಡಿಸುತ್ತೇವೆ ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರದಲ್ಲಿ ಮಡಿಕೆಯಲ್ಲಿ ಅಡುಗೆ ಮಾಡಿಸುತ್ತೇವೆ ಮಕ್ಕಳ ಕೈಯಿಂದ ಅಡುಗೆ ಮಾಡಿಸುತ್ತೇವೆ ಎಲ್ಲಾ ಮಕ್ಕಳ ಬರಬೇಕು ನಿಮ್ಮ ಮಕ್ಕಳು ಏನ ಮಾಡುತಾ ಇದ್ದಾರೆ ಎಂದು ತಿಳಿದುಕೊಳ್ಳಬೇಕು. ಇದು ರಂಗಭೂಮಿ ಸಂಗೀತ ಸಾಹಿತ್ಯ ನಶೆ ಈ ನಶೆಯಲ್ಲಿ ಎಷ್ಟೋ ಕಂಪನಿ ಕಲಾವಿದರು ತಮ್ಮ ಮನೆ ಆಸ್ತಿ ಮಾಡಿಕೊಂಡು ಕಂಪನಿ ಕಟ್ಟಿದ್ದಾರೆ ಇಂದಿನ ಮಕ್ಕಳು ಗಾಂಜ, ಸಿಗರೇಟ, ಈ ಕೆಟ್ಟ ಅಭ್ಯಾಸದಿಂದ ಹೊರಬರುವುದಕ್ಕೆ ಸಂಗೀತ ಸಾಹಿತ್ಯ ರಂಗಭೂಮಿ ಬೇಕು ಇಟಿಟಿಡಿಟಿ ಆಗಿರಬಹುದು, ಆಥಿಣಡಿ ಆಗಿರಬಹುದು ಅವರು ಒಳ್ಳೆ ಮನುಷ್ಯತ್ವ ಬೆಳೆಸದಿದ್ದರೆ

ಅವರು ಮನುಷ್ಯ ರಾಗಲ್ಲ ಸಂಗೀತ, ಸಾಹಿತ್ಯ, ಕಲೆ, ನೃತ್ಯ, ಇವು ಮಕ್ಕಳಿಗೆ ಪರಿಪೂರ್ಣ ವ್ಯಕ್ತಿತ್ವ ರೂಪಿಸುತ್ತವೆ. ಓದಿನ ಜೊತೆಗೆ ಪಠ್ಯೇತರ ಚಟುವಟಿಕೆ ಮಕ್ಕಳಿಗೆ ಖಂಡಿತ ಬೇಕು ಎಂದು ಹೇಳಿದರು.

2026 ಮಕ್ಕಳ ಬೇಸಿಗೆ ರಮಗ ತರಬೇತಿ ಶಿಬಿರದ ನಿರ್ದೇಶಕ ರಾಜಕುಮಾರ ಎಸ್.ಕೆ.ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀನಿವಾದ ದೋರನಹಳ್ಳಿ ನಿರ್ವಹಿಸಿದರು. ಕಾರ್ಯಕ್ರಮ ಶ್ರದ್ಧಾ ತಂದೆ ಗುರು ಅವರ ಭರತನಾಟ್ಯದೊಂದಿಗೆ ಪ್ರಾರಂಭವಾಯಿತು ಪ್ರಾರ್ಥನೆಯನ್ನು ಶಿಬಿರದ ಮಕ್ಕಳ ಬೇಸಿರ ರಂಗ ತರಬೇತಿ ಶಿಬಿರದ ಮಕ್ಕಳು ನಡೆಸಿಕೊಟ್ಟರು ಕಾರ್ಯಕ್ರ ಮದ ನಂತರ ಕಲಬುರಗಿ ರಂಗಾ ಯಣದ ರೆಪರ್ಟರಿ ಕಲಾವಿದರು ''ಕಾಲಚಕ್ರ'' ನಾಟಕವನ್ನು ಪ್ರದರ್ಶಿಸಿದರು.

ದೀಪೋತ್ಸವ ವೈಭವ: ನೀಲಕಂಠ ಕಾಳೇಶ್ವರ ದೇವಾಲಯದಲ್ಲಿ ಭಕ್ತಿ ಸಂಭ್ರಮ

ಕಾಳಗಿ: ಏ.16:ಇಲ್ಲಿನ ಸುಕ್ಷೇತ್ರ ''ದಕ್ಷಿಣ ಕಾಶಿ'' ಎಂದೇ ಖ್ಯಾತಿ ಪಡೆದಿರುವ ಶ್ರೀ ನೀಲಕಂಠ ಕಾಳೇಶ್ವರ ದೇವಾಲಯದಲ್ಲಿ ಸೋಮವಾರ ರಾತ್ರಿ ಭಕ್ತಿಭಾವದಿಂದ ಕಾರ್ಯಕ್ರಮ ಜರುಗಿತು.

ಹಲಗೆ, ಬಾಜಾ-ಭಜಂತ್ರಿಗಳ ಮೇಳದೊಂದಿಗೆ ಭವ್ಯ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಆಗಮಿಸಿದ ಪೂಜ್ಯ ಶ್ರೀ ಚಿಕ್ಕಗುರುನಂಜೇಶ್ವರರು, ನೀಲಕಂಠ ಮರಿದೇವರು ಹಾಗೂ ಶಾಸಕ ಡಾ. ಅವಿನಾಶ ಜಾಧವ ದೀಪ ಬೆಳಗಿಸಿ ಚಾಲನೆ ನೀಡಿದರು.ದೇವಾಲಯವು ಸಾವಿರಾರು ದೀಪಗಳಿಂದ ಪ್ರಕಾಶಮಾನವಾಗಿ ಕಂಗೊಳಿಸಿತು. ಈ ಸಂದರ್ಭದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು ಭಕ್ತಿ ಭಾವದಲ್ಲಿ ತೊಡಗಿದ್ದರು. ಕಾರ್ಯಕ್ರಮವು ಶ್ರದ್ಧಾ-ಭಕ್ತಿಯಿಂದ ನೆರವೇರಿತು.ಈ ಸಂದರ್ಭದಲ್ಲಿ ಶಿವಶರಣಪ್ಪ ಕಮಲಾಪೂರ, ಶರಣಗೌಡ ಪಾಟೀಲ, ಶೇಖರ ಪಾಟೀಲ, ಜಗದೀಶ ಪಾಟೀಲ, ಮಲ್ಲಿನಾಥ ಪಾಟೀಲ, ಪ್ರಶಾಂತ ಕದಂ, ರಮೇಶ ಕಿಟ್ಟದ, ಪುರುಷೋತ್ತಮ ಗುತ್ತೇದಾರ, ಬಸವರಾಜ ಸಿಂಗಶೆಟ್ಟಿ, ಬಲರಾಮ ವಲ್ಯಾಪುರ, ಇಂದ್ರಜೀತ ಕಟ್ಟಿಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೆ ಎಚ್ ಬಿ ಗ್ರೀನ್ ಪಾರ್ಕ್ ಬಡಾವಣೆಯಲ್ಲಿ ಸಂಗೀತ ಸಂಭ್ರಮ

ಕಲಬುರಗಿ:ಏ.16:ಸಂಗೀತವೆಂದರೆ ಕೇವಲ ಮನರಂಜನೆ ಅಲ್ಲ, ಅದು ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿ ಸುವ ಒಂದು ಶಕ್ತಿಯುತ ಭಾಷೆಯಾ ಗಿದೆ ಎಂದು ಕೆ 5ಎಚ್ ಬಿ ಗ್ರೀನ್ ಪಾರ್ಕ್ ಕ್ಷೇಮಾಭಿವೃದ್ಧಿ ನಿವಾಸಿಗಳ ಸಂಘದ ಅಧ್ಯಕ್ಷರಾದ ಸಂಜೀವಕು ಮಾರ ಶೆಟ್ಟಿ ಹೇಳಿದರು.ನಗರದ ಸಂತೋಷ ಕಾಲೋನಿಯ ಕೆ ಎಚ್ ಬಿ ಗ್ರೀನ್ ಪಾರ್ಕ್ ಬಡಾವಣೆಯಲ್ಲಿ ಶ್ರೀದೇವಿ ಸರಸ್ವತಿ ಕಲಾ ಬಳಗ ಸಂಘ ಹಾಗೂ ಕನ್ನಡ ಮತ್ತು ಸಂಸ್ಕತಿ ಇಲಾಖೆಯ ಸಂಯುಕ್ತ



ಆಶ್ರಯ ದಲ್ಲಿ ಜಾನಪದ ಸಮಾವೇಶ ಉದ್ಘಾಟಿಸಿ ಮಾತನಾಡುತ್ತ ನಮ್ಮ ಭಾರತಿ ೀಯ ಸಂಗೀತ ಪರಂಪರೆ ಬಹಳ ಶ್ರೀಮಂತವಾಗಿದೆ. ಶಾಸ್ತ್ರೀ ಯ ಸಂಗೀತದಿಂದ ಹಿಡಿದು ಜನಪದ ಗೀತೆಗಳವರೆಗೆ, ಪ್ರತಿಯೊ ಂದು ಸ್ವರವೂ ನಮ್ಮ ಹೃದಯವನ್ನು ಸ್ಪರ್ಶಿಸುತ್ತದೆ ಎಂದು ಮಾರ್ಮಿಕವಾಗಿ ನುಡಿದರು.ಮುಖ್ಯ ಅತಿಥಿಗಳಾಗಿ ನ್ಯಾಯವಾದಿ ಹಣಮಂತರಾಯ ಅಟ್ಟೂರ, ವಿನೋದಕುಮಾರ ಪಡನೂರ, ಸಂಗಮೇಶ ಸರಡಗಿ,ಬಸವರಾಜ ಹೆಳವರ, ದಿಲೀಪಕುಮಾರ ಭಕ್ರೆ, ಶ್ರೀನಿವಾಸ ಬುಜ್ಜಿ, ಮಲಕಾರಿ ಪೂಜಾರಿ,ಶಿವಕಾಂತ ಚಿಮ್ಮಾ, ವೀರೇಶ ಬೋಳಶೆಟ್ಟಿ ಆಗಮಿಸಿದರು.ಸಂಘದ ಅಧ್ಯಕ್ಷರಾದ ಶರಣಪ್ಪ ಕಟ್ಟಿಮನಿ (ಸಾಗನೂರ) ಅಧ್ಯಕ್ಷತೆ ವಹಿಸಿದರು. ಕಾರ್ಯಕ್ರಮದಲ್ಲಿ ಸಂಗೀತ ಕಲಾವಿದರಾದ ಗುರುಶಾಂತಯ್ಯ ಸ್ಥಾವರಮಾಠ,ಉದಯಕುಮಾರ ಶಾಸ್ತ್ರೀ ಭೀಮಳ್ಳಿ, ಪವಿತ್ರಾ ಮಠ, ಪ್ರಶಾಂತ ಗೋಲ್ಡಸ್ಮಿತ, ಪರಶುರಾಮ ಗರೂರ, ಬಾಬುರಾವ ಕೋಬಾಳ, ಸೂರ್ಯಕಾಂತ ಪೂಜಾರಿ, ಸೂರ್ಯಕಾಂತ ಹೊಳೆ ಅವರಾದ,ಬಂಡಯ್ಯ ಶಾಸ್ತ್ರಿ, ಸುಂಟನೂರ, ಚೇತನ ಬಿದಿಮನಿ, ವಿನೋದ ದಸ್ತಾಪುರ,ಗಂಗಾ0ಬಿಕ ಮಠಪತಿ, ವೀರಯ್ಯ ಮಠಪತಿ,

ವಾರ್ಡ್ ವಿಂಗಡಣೆ ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ವಿಜಯನಗರ(ಹೊಸಪೇಟೆ), ಏ.16:ಜಿಲ್ಲೆಯ ಹರಪನಹಳ್ಳಿ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಒಟ್ಟು 55743 ಜನಸಂಖ್ಯೆ ಇದ್ದು, 27 ವಾರ್ಡು ಗಳಿರುತ್ತವೆ.

ಅವುಗಳನ್ನು 31 ವಾರ್ಡ್ ಗಳಾಗಿ ಪುನರ್ ವಿಂಗಡಣೆ ಮಾಡಿರುವ ಚಕ್ಕುಬಂದಿ ಹಾಗೂ ಜನಸಂಖ್ಯೆ ವಿವರಗಳೊಂದಿಗೆ ಪೌರಾಯುಕ್ತರಿಂದ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಬಗ್ಗೆ ಯಾವುದೇ ಹಕ್ಕು ಆಕ್ಷೇಪಣೆ ಇದ್ದಲ್ಲಿ ಏಪ್ರಿಲ್ 27 ರೊಳಗೆ ನಗರಸಭೆ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿಗೆ ಸಲ್ಲಿಸಬಹುದು. ಅವಧಿ ಮುಗಿದ ನಂತರ ಬಂದತಹ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಮೊದಲನೇ ಪುಟದಿಂದ

ಕಾರು-ಖಾಸಗಿ ಬಸ್ ಮುಖಾಮುಖಿ ಡಿಕ್ಕಿ, 6 ಮಂದಿ ಸಜೀವ ದಹನ

ಕೃಷ್ಣನಾಯಕ ಅವರು ಸತತ ಎರಡು ಬಾರಿ ಪ.ಪಂಚಾಯತಿ ಸದಸ್ಯರಾಗಿದ್ದಾರೆ. ಈ ಹಿಂದೆ ಇರುವ ಕಂಡಕ್ಟರ್ ಆಗಿ ಕೆಲಸ ನಿರ್ವಹಿಸಿದ್ದಾರೆ. ಒಬ್ಬಳೆ ಮಗಳು ಇದ್ದಳು . ಶರಣಪ್ಪ ಅವರು ಅಂಬೇಡ್ಕರ್ ಅಭಿವೃದ್ಧಿ ನಿಗಮದ ತಾಲೂಕ ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂತಾಪ :- ಕೃಷ್ಣನಾಯಕ ಕುಟುಂಬ ನಿಧನಕ್ಕೆ ಸಚಿವರಾದ ಎನ್.ಎಸ್.ಬೋಸರಾಜು, ಮಾನ್ವಿ ಶಾಸಕರಾದ ಜಿ.ಹಂಪಯ್ಯನಾಯಕ, ಗ್ರಾಮೀಣ ಶಾಸಕರಾದ ಬಸವಗೌಡ ದದ್ದಲ್, ಮಾಜಿ ಸಂಸದರಾದ ಬಿ.ವಿ.ನಾಯಕ, ಮಾಜಿಸಚಿವರಾದ ಕೆ.ಶಿವನಗೌಡ ನಾಯಕ, ಜೆ.ಶರಣಪ್ಪಗೌಡ,ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ,ಉಪಾದ್ಯಕ್ಷೆ ಲಕ್ಷ್ಮೀ, ಸರ್ವಸದಸ್ಯರು, ವಾಲ್ಮೀಕಿ ಸಮಾಜದವರು, ವಿವಿಧ ಸಂಘಟನೆಗಳ ಮುಖಂಡರು, ಪತ್ರಕರ್ತರು ಸಂತಾಪ ತಿಳಿಸಿದ್ದಾರೆ

ಅಧಿಕ ಉಷ್ಣಾಂಶ ಹಿನ್ನಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಸಲಹೆ

ಅನಾರೋಗ್ಯದಲ್ಲಿರುವ ಕಾರ್ಮಿಕರಿಗೆ ಹೆಚ್ಚಿನ ಗಮನ ನೀಡಬೇಕು. ಕಲ್ಲಂಗಡಿ, ಕರಬೂಜ, ಕಿತ್ತಳೆ ದ್ರಾಕ್ಷಿ, ಅನನಾಸ್, ಸೌತೆಕಾಯಿ, ಎಳನೀರನ್ನು ಹೆಚ್ಚಾಗಿ ಸೇವಿಸಬೇಕು. ನವಜಾತ ಶಿಶುಗಳು, ಹಿರಿಯ ನಾಗರಿಕರು ಹಾಗೂ ಚಿಕ್ಕ ಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು ಹಾಗೂ ಇತರ ಅರೋಗ್ಯ ಸಮಸ್ಯೆಗಳಿರುವವರು, ಅದರಲ್ಲೂ ವಿಶೇಷವಾಗಿ ಹೃದ್ರೋಗ ಹಾಗೂ ರಕ್ತದ ಒತ್ತಡದಿಂದ ಬಳಲುತ್ತಿರುವವರು ಹೆಚ್ಚು ಜಾಗರೂಕತೆ ವಹಿಸಬೇಕು.

ಸಾರ್ವಜನಿಕರು ಏನು ಮಾಡಬಾರದು: ಮಕ್ಕಳು ಅಥವಾ ಸಾಕುಪ್ರಾಣಿಗಳನ್ನು ಬಿಸಿಲಿನಲ್ಲಿ ನಿಲ್ಲಿಸಿದ ವಾಹನಗಳ ಹತ್ತಿರ ಬಿಡಬೇಡಿ. ವಾಹನಗಳ ಒಳಾಂಗಣದಲ್ಲಿನ ಹೆಚ್ಚಿನ ತಾಪಮಾನವು ಅವರಿಗೆ ಹಾಗೂ ಅವುಗಳಿಗೆ ಅಪಾಯಕಾರಿಯಾಗಬಹುದು. ಕಪ್ಪು ಬಟ್ಟೆ ಅಥವಾ ಬಿಗಿಯಾದ ಬಟ್ಟೆಗಳನ್ನು ಧರಿಸುವುದನ್ನು ತಪ್ಪಿಸಬೇಕು. ಹೊರಗಿನ ತಾಪಮಾನ ಹೆಚ್ಚಾದಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಬೇಕು.

ಮಧ್ಯಾಹ್ನ 12 ರಿಂದ 3 ರವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಿ. ಬಿಸಿಲಿನ ಸಮಯದಲ್ಲಿ ಅಡುಗೆ ಮಾಡುವುದನ್ನು ತಪ್ಪಿಸಿ. ಅಡಿಗೆ ಪ್ರದೇಶವನ್ನು ಸಮರ್ಪಕವಾಗಿ ಗಾಳಿಯಾಡಲು ಬಾಗಿಲು ಮತ್ತು ಕಿಟಕಿಗಳನ್ನು ತೆರೆಬೇಕು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಹಾನಿಕಾರಕ ಪಾನೀಯಗಳನ್ನು ಸೇವಿಸಬೇಡಿ. ಇವು ಹೊಟ್ಟೆ ನೋವನ್ನು ಉಂಟು ಮಾಡುತ್ತದೆ. ಹಾನಿಕಾರಕವಾದ ಆಹಾರ ಮತ್ತು ಹಳಸಿದ ಆಹಾರವನ್ನು ಸೇವಿಸಬಾರದು. ಅಲ್ಲದೆ ಚಪ್ಪಲಿ ಧರಿಸದೆ ಹೊರಹೋಗುವ ಅಭ್ಯಾಸವನ್ನು ತಪ್ಪಿಸಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಹಟ್ಟಿ ಪಟ್ಟಣದಲ್ಲಿ ಪಶು ಚಿಕಿತ್ಸಾ ಕೇಂದ್ರ ಮತ್ತು ಹೋಬಳಿ ಕೇಂದ್ರಗಳನ್ನು ತೆರೆಯಲು ಬಯ್ಯಾಪುರ ಮನವಿ

ಪಶು ಚಿಕಿತ್ಸಾ ಕೇಂದ್ರವನ್ನು ಮಂಜೂರು ಮಾಡಬೇಕೆಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ,ಅವರಲ್ಲಿ ಮನವಿ ಮನವಿಮಾಕೊಂಡರು

ಜೊತೆಗೆ ಹಟ್ಟಿ ಪಟ್ಟಣವು ಸುಮಾರು 10-15 ಸುತ್ತಮುತ್ತಲಿನ ಹಳ್ಳಿಯ ರೈತರು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗಾಗಿ ಹಟ್ಟಿಯಿಂದ 10 ಕಿ.ಮೀ. ದೂರವಿರುವ ಹೋಬಳಿ ಕೇಂದ್ರ, ಗುರುಗುಂಟಾಕ್ಕೆ ಹೋಗಿಬರಬೇಕಾಗುತ್ತದೆ.ತಾಲೂಕಿನ ಕಾರಣ ಹಟ್ಟಿ, ಮಾವಿನಭಾವಿ, ನಾಗರಹಾಳ, ಆನೆಹೊಸೂರನ್ನು ಹೋಬಳಿ ಕೇಂದ್ರವನ್ನಾಗಿ ಮಾಡಲು ಒತ್ತಾಯಿಸಿ ಕಂದಾಯ ಸಚಿವ ಕೃಷ್ಣ ಬೈರೇಗೌಡ,ಅವರಲ್ಲಿ ಮನವಿ ಮನವಿಮಾಕೊಂಡರು.

ಈ ಮೇಲಿನ ಎರಡು ವಿಷಯಗಳ ಕುರಿತು ಸಂಬಂದಿಸಿದ ಸಚಿವರ ಗಮನಕ್ಕೆ ತಂದಿದ್ದು,ಕಾರಣ ಸರ್ಕಾರ ತಕ್ಷಣ ಕ್ರಮ ತಗೆದುಕೊಂಡರೆ ತಾಲೂಕಿನ ಜನತೆಯ ಬಹುದೊಡ್ಡ ಬೇಡಿಕೆ ಈಡೇರಿದಂತಾಗುತ್ತದೆ ಎಂದರು.

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

ಅಚ್ಚುಕಟ್ಟಾಗಿ ಜಯಂತಿ ಆಚರಿಸಬೇಕು - ಅಶೋಕಪವಾರ

ಜುಬೇರ್ , ಸಮುದಾಯ ಸಂಘಟನೆ ಅದಿಕಾರಿ ಹಂಪಯ್ಯ ಪಾಟೀಲ್, ಕಂದಾಯ ನಿರೀಕ್ಷಕ ಶ್ರೀನಾಥ, ಮುಖಂಡರಾದ ಅಯ್ಯನಗೌಡ ಐರೆಡ್ಡಿ, ಜೆ.ದೇವರಾಜಗೌಡ, ವೈ.ಭೂಪನಗೌಡ, ಹನುಮಂತ, ರಮೇಶ ಜಂಬಲದಿನ್ನಿ, ಚಂದ್ರಶೇಖರ ಹಡಪದ, ಅಯ್ಯಪ್ಪ, ರಮೇಶ, ಹನುಮಂತ ಸೇರಿದಂತೆ ಇನ್ನಿತರರು ಇದರು.

ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ ಸದಸ್ಯರಿಂದ ವಿವಿಧ ಕಡೆ ಭೇಟಿ; ಪರಿಶೀಲನೆ

ಹಾಜರಾತಿಗೂ ವ್ಯತ್ಯಾಸವಾಗಕೂಡದು. ಈ ನಿಟ್ಟಿನಲ್ಲಿ ವಸತಿ ನಿಲಯಗಳಲ್ಲಿ ವ್ಯವಸ್ಥೆಯನ್ನು ಮಾಡಬೇಕೆಂದು ಸಂಬಂಧಿಸಿದ ನಿಲಯ ಪಾಲಕರಿಗೆ ಸೂಚನೆ ನೀಡಿದರು.ಇದೇ ಸಂದರ್ಭದಲ್ಲಿ ಜಿಲ್ಲಾ ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಾಧಿಕಾರಿ ಶಿವಮಾನಪ್ಪ, ರಿಮ್ಸ್ ಆಸ್ಪತ್ರೆಯ ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ.ಸೂರ್ಯಕಾಂತ್, ಡಾ.ಅರವಿಂದ ಸಾಗವಿ, ಡಾ.ಜಯಕೃಷ್ಣ, ಡಾ.ಸೋಮಶೇಖರ, ಡಾ. ಶರಣಬಸವ ಸೇರಿದಂತೆ ರಿಮ್ಸ್ ಆಸ್ಪತ್ರೆಯ ವಿವಿಧ ವಿಭಾಗದ ಮುಖ್ಯಸ್ಥರು, ವಿವಿಧ ವಸತಿ ನಿಲಯಗಳ ನಿಲಯ ಪಾಲಕರು ಇದ್ದರು.

ಬಿಎಸ್‌ಎನ್‌ಎಲ್ ಪಿಂಚಣಿದಾರರಿಗೆ ತುಟ್ಟಿ ಪರಿಹಾರ ವಿಳಂಬ: ಪ್ರತಿಭಟನೆ

ಲಕ್ಷಕ್ಕೂ ಹೆಚ್ಚು ಬಿಎಸ್‌ಎನ್‌ಎಲ್ ಹಾಗೂ ಎಂಟಿಎನ್‌ಎಲ್ ಪಿಂಚಣಿ ದಾರರು ಇದರಿಂದ ಸಂಕಷ್ಟ ಅನುಭ ವಿಸುತ್ತಿದ್ದಾರೆ ಎಂದು ಆರೋಪಿಸಿದರು.

ಫೆ.27ರ ಆದೇಶವನ್ನು ತಕ್ಷಣ ಜಾರಿಗೆ ತರಬೇಕು, ಜನವರಿ 1ರಿಂದ ಅನ್ವಯವಾಗುವಂತೆ ಹೆಚ್ಚಿದ ಡಿಆರ್ ನೀಡಬೇಕು, ಆದೇಶದ ಪ್ಯಾರಾ 5 ಅನ್ನು ಹಿಂತೆಗೆದುಕೊಳ್ಳಬೇಕು ಹಾಗೂ ಮುಂದಿನ ದಿನಗಳಲ್ಲಿ ತುಟ್ಟಿ ಪರಿಹಾರವನ್ನು ಸ್ವಯಂಚಾಲಿತವಾಗಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಏಪ್ರಿಲ್ 30ರಂದು ದೇಶಾದ್ಯಂತ ಸಿಸಿಎ/ಬಿಎಸ್‌ಎನ್‌ಎಲ್ ಕಚೇರಿಗಳ ಮುಂದೆ ಬೃಹತ್ ಶಾಂತಿಯುತ ಧರಣಿ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಂಘದ ವಲಯ ಉಪಾಧ್ಯಕ್ಷ ಎಸ್.ವಿ.ಅರಳಿ, ಜಿಲ್ಲಾಧ್ಯಕ್ಷ ಸಿದ್ದಪ್ಪ, ಜಿಲ್ಲಾ ಕಾರ್ಯದರ್ಶಿ ಸೈಯದ್ ಅಕ್ಬರ್ ಹುಸೇನ್, ಖಜಾಂಚಿ ಮೊಹ್ಮದ್ ಯೂನೂಸ್, ಗೌರವಾಧ್ಯಕ್ಷ ಬಸವರಾಜ, ಬಾಬುಲಾಲ್, ಮುಕ್ತಾ ಯರನಾಕರ ಸೇರಿದಂತೆ ಅನೇಕರಿದ್ದರು.

ಪ್ರಬುದ್ಧ ಭಾರತ ನಿರ್ಮಾಣಕ್ಕೆ ಕೈ ಜೋಡಿಸಿ: ಪೋತೆ



ಚಡಚಣ:ಏ.16:

ಸಾಮಾಜಿಕ ಬದಲಾವಣೆಗೆ ನಾವೆಲ್ಲರೂ ಶೈಕ್ಷಣಿಕವಾಗಿ ಮುಂದುವರೆದಾಗ ಮಾತ್ರ, ಪ್ರಬುದ್ಧ ಭಾರತ ನಿರ್ಮಾಣ ಮಾಡಲು ಸಾಧ್ಯ ಎಂದು ಸಂಜಯ ಹೇಳಿದರು.

ಅವರು, ತಾಲೂಕು ಆಡಳಿತ, ತಾಲೂಕು ಪಂಚಾಯತ್, ಪಟ್ಟಣ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ, ಚಡಚಣ ಇವರ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ರವರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ಕರಾಗಿ ಮಾತನಾಡಿದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ನಾವು ಅಳವಡಿಸಿಕೊಳ್ಳಬೇಕು. ವರ್ಷಕ್ಕೆ ಒಂದು ಬಾರಿ ಜಯಂತೋತ್ಸವ ಕಾರ್ಯಕ್ರಮ ಮಾಡಿದರೆ ಸಾಲದು. ಅವರು ಆಶೆಯದಂತೆ ಗುಣಮಟ್ಟದ ಶಿಕ್ಷಣವನ್ನು ಪಡೆದು ಪ್ರಬುದ್ಧತೆ ಬರಬೇಕು. ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ

ನೀಡುವ ಕಡೆಗೆ ಗಮನ ಹರಿಸಬೇಕು, ಮಕ್ಕಳಿಗೆ ಮೊಬೈಲ್, ಟಿವಿಯಿಂದ ದೂರವಾಗುವಂತೆ ನೋಡಿಕೊಳ್ಳಿ. ಸಮಾಜದಲ್ಲಿ ಮೌಢ್ಯ ಆಚರಣೆಯ ಪದ್ಧತಿಯಿಂದ ಹೊರಬರಬೇಕು ಎಂದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನದ ಮೂಲಕ ಪ್ರಜಾಪ್ರಭುತ್ವದ ದೊಡ್ಡ ಶಕ್ತಿಯನ್ನು ನೀಡಿದ್ದಾರೆ. ಯುವಕರು ದುಶ್ಚಟಗಳಿಗೆ ಬಲಿಯಾಗದೆ ಶೈಕ್ಷಣಿಕವಾಗಿ ಮುಂದುವರೆದಾಗ ಮಾತ್ರ ನಾವು ಸಮಾಜಕ್ಕೆ ಮತ್ತು ದೇಶಕ್ಕೆ ಉತ್ತಮ ಕೊಡುಗೆ ನೀಡಲು ಸಾಧ್ಯ ಎಂದರು.

ಶಾಸಕ ವಿಠ್ಠಲ ಕಟಕಧೋಂಡ ಮಾತನಾಡಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ರವರು ದೇಶಕ್ಕೆ ಅಷ್ಟೇ ಅಲ್ಲ ಜಗತ್ತಿನ ಅತ್ಯಂತ ಶ್ರೇಷ್ಠ ನಾಯಕ ಅವರ ಕಂಡ ಕನಸು ನನಸು ಮಾಡಲು ನಾವೆಲ್ಲ ಅವರ ಮಾರ್ಗದ ಹಾದಿಯಲ್ಲಿ ನಡೆಯಬೇಕು. ಶೀಘ್ರದಲ್ಲಿ ಚಡಚಣ ಪಟ್ಟಣದಲ್ಲಿ ಬೃಹತ್ ಮೂರ್ತಿ ಪ್ರತಿಷ್ಠಾಪನೆ ನಿರ್ಮಾಣ ಮಾಡಲಾಗುವುದು ಎಂದರು.

'' ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದ ಬರಡೋಲ ಗ್ರಾಮದ ಲಕ್ಷ್ಮೀ ನಂದೂರ, ಇತ್ತೀಚಿಗೆ ನಿವೃತ್ತಿ ಹೊಂದಿದ ಸೈನಿಕ ವಿಠೋಬಾ ಬಿರಾದಾರ ಮತ್ತು ಉಪನ್ಯಾಸಕ ಸಂಜೆಯ ಅವರಿಗೆ ತಾಲುಕು ಆಡಳಿತ ದಿಂದ ವಿಶೇಷವಾಗಿ ಸನ್ಮಾನಿಸಲಾಯಿತು.

ಸಾಂಸ್ಕೃತಿಕ ನಾಯಕ ಬಸವಣ್ಣನ ಜಯಂತಿ ಅದ್ದೂರಿಯಾಗಿ ಅರ್ಥಪೂರ್ಣ ಆಚರಣೆಗೆ ನಿರ್ಧಾರ

ತಾಳಿಕೋಟೆ:ಏ.16:

ಜಗಜ್ಯೋತಿ ಬಸವೇಶ್ವರ ಮತ್ತು ಕರ್ನಾಟಕ ಸಂಸ್ಕತಿಕ ನಾಯಕ ಬಸವಣ್ಣನವರ ಜಯಂತಿಯನ್ನು ಏಪ್ರೀಲ್ 20 ರಂದು ಅರ್ಥ ಪೂರ್ಣವಾಗಿ ಅದ್ದೂರಿಯಾಗಿ ತಾಲೂಕ ಆಡಳಿತದ ನೆತೃತ್ವದಲ್ಲಿ ಆಚ 'ರಿಸಲು ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಗಿದೆ ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ತಾಲೂಕಾ ತಹಶೀಲ್ದಾರ್ ಡಾ.ವಿನಯಾ ಹೂಗಾರ ಹೇಳಿದರು.



ಬುಧವಾರ ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗ 'ಣದಲ್ಲಿ ತಾಲೂಕಾ ಆಡಳಿತ ವತಿಯಿಂದ ಬಸವಣ್ಣನವರ ಜಯಂತಿ ಆಚರಣೆಯ ಕುರಿತು ಕರೆಯಲಾದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು 12ನೇ ಶತಮಾನದಲ್ಲಿ ಸಮಾನತೆಯ ಕ್ರಾಂತಿಯನ್ನು ತಂದ ವಿಶ್ವಗುರು ಅಣ್ಣ ಬಸವಣ್ಣನವರ ಜಯಂತಿಯನ್ನು ಅತ್ಯಂತ ಸಂಭ್ರಮ ಹಾಗೂ ವಿಜೃಂಭಣೆಯಿದ ಆಚರಿಸಲಾಗುವುದು. ಏಪ್ರಿಲ್ 20 ರಂದು ಮುಂಜಾನೆ 8-30 ಘಂಟೆಗೆ ರಾಜವಾಡೆಯಿಂದ ಶ್ರೀ ಬಸವೇಶ್ವರರ ಭಾವಚಿತ್ರದ ಭವ್ಯ ಮೆರವಣಿಗೆ ಆರಂಭಿಸಲಾಗುವುದು. ಮೆರವಣಿಗೆ ಸಕಲ ವಾದ್ಯ ಮೇಳಗಳೊಂದಿಗೆ ಪಟ್ಟಣದ ಕತ್ರಿ ಬಜಾರ್, ಶಿವಾಜಿ ಸರ್ಕಲ್, ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್ ದಿಂದ ಬಸ್ ನಿಲ್ದಾಣದ ಮಾರ್ಗವಾಗಿ ಶ್ರೀ ಬಸವೇಶ್ವರ ವೃತ್ತಕ್ಕೆ ತಲುಪುವುದು. ನಂತರ ಅಲ್ಲಿಯೇ ವೇದಿಕೆ ಕಾರ್ಯಕ್ರಮ ಜರಗುವುದು. ಜಯಂತಿಯನ್ನು ಸರ್ಕಾರದ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು. ಪಟ್ಟಣದ ಪ್ರಮುಖ ವೃತ್ತಗಳನ್ನು ಅಲಂಕರಿಸಲಾಗುವುದು ಅಣ್ಣ ಬಸವಣ್ಣನವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆಗೆ ತಿಳಿಸಲು ಉಪನ್ಯಾಸ ಆಯೋಜಿಸಲಾಗುವುದು. ಎಲ್ಲ ಕಾರ್ಯಕ್ರಮಗಳು ಶಾಂತಿ ಯುತವಾಗಿ ನಡೆಯುವಂತಾಗಲು ಪೊಲೀಸ್ ಇಲಾಖೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಶ್ರೀ ಬಸವೇಶ್ವರ ಉತ್ಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ ಮಾತನಾಡಿ ಸಮಾನತೆಯ ಹರಿಕಾರರಾದ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ತಾಲೂಕ ಆಡಳಿತ ತೆಗೆದುಕೊಳ್ಳುವ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸಮಾಜ ಬಾಂಧವರು ಸಂಪೂರ್ಣ ಸಹಕಾರ ನೀಡಲಿದ್ದಾರೆ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಲೋಪ ಆಗದಂತೆ ನೋಡಿಕೊಳ್ಳಬೇಕು. ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರನ್ನು ಸೇರಿಸಲು ಪ್ರಯತ್ನಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗಣ್ಯರಾದ ಕಾಶಿನಾಥ ಮುರಾಳ, ಎಂ.ಎಸ್.ಸರಶಟ್ಟಿ, ಶರಣಗೌಡ ಪಾಟೀಲ,

ತಿಪ್ಪಣ್ಣ ಸಜ್ಜನ, ಪರಶುರಾಮ ತಂಗಡಗಿ, ರಾಜು ಸಜ್ಜನ, ಅಶೋಕ ಚಿನಗುಡಿ, ಎಂ.ಎಸ್. ನಾಗರಾಳ, ನಿಂಗಣ್ಣ ಕುಂಟೋಜಿ, ರವಿ ಚಂದುಕರ, ದತ್ತು ಉಬಾಳೆ, ಎಸ್.ಎಂ.ಪಾಲ್ಕಿ, ಲಂಕೇಶ ಪಾಟೀಲ, ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದ'ವ'ೂ'ರ'ವ'ುತ, ಪಿಎಸ್ಐ ಎಸ್.ಎಂ.ಪಡಶೆಟ್ಟಿ, ತಾಪಂ ಸಹಾಯಕ ನಿರ್ದೇಶಕಿ ಸುಜಾತ ಯಡ್ರಾಮಿ, ಪುರಸಭೆ ಕಂದಾಯ ನಿರೀಕ್ಷಕ ಸುರೇಶ ಅಮರಣ್ಣವರ ಹಾಗೂ ವಿವಿಧ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾಗಬೇಕು: ಡಿಸಿ

ವಿಜಯಪುರ, ಏ. 16:

ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉನ್ನತ ಜೀವನ ನಡೆಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಹೇಳಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಸರಳ ಸಮಾರಂಭದಲ್ಲಿ 2026ರ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಜಿಲ್ಲೆಗೆ ಕ್ರಮವಾಗಿ ಸ್ಥಾನ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಜಿಲ್ಲಾಡಳಿತ ದಿಂದ ಸನ್ಮಾನಿಸಿ ಅವರು ಮಾತನಾಡಿದರು.

ಈ ದಿಸೆಯಲ್ಲಿ ವಿದ್ಯಾರ್ಥಿಗಳು ಆಯಾ ಶೈಕ್ಷಣಿಕ ವರ್ಷಾರಂಭ ದಿದಲೇ ಆಸಕ್ತಿಯಿಂದ ಓದಲಾರಂಭಿಸಿದರೆ ಪರೀಕ್ಷೆ ಯಶಸ್ಸು ನೀರು ಕುಡಿದಷ್ಟೇ ಸುಲಭವಾಗುತ್ತದೆ ಎಂದರು.

ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಠಿಣ ಅಧ್ಯಯನ ಶೈಲಿ ರೂಢಿಸಿಕೊಳ್ಳಬೇಕು. ವಿಷಯ ಕರಗತ ಮಾಡಿಕೊಂಡು ಮನನ ಮಾಡಿಕೊಳ್ಳುವ ಮೂಲಕ ತಮ್ಮನ್ನು ತಾವು ಮೌಲ್ಯಮಾಪನಕ್ಕೊಳಡಿಸಿ

ಕೊಂಡರೆ, ಓದಿದ್ದೆಲ್ಲವೂ ಸ್ಮೃತಿ ಪಟಲದಲ್ಲಿ ಉಳಿಯುತ್ತದೆ ಎಂದರು.

ವಿದ್ಯಾಭ್ಯಾಸ ದೊಟ್ಟಿಗೆ ದೈಹಿಕ ಚಟುವಟಿಕೆಗಳಿಗೂ ನೀಡಬೇಕು. ತಮಗೆ ಆಸಕ್ತಿದಾಯಕ ಕ್ರೀಡೆಗಳಲ್ಲೂ ತೊಡಗಿಸಿಕೊಂಡರೆ ಅಧ್ಯಯನ ಇನ್ನಷ್ಟು ಸುಲಭವಾಗುತ್ತದೆ ಎಂದರು.

ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಸೇಂಟ್ ಜೋಸೆಫ್

ಪಿಯು ಕಾಲೇಜ್ ನ ಪ್ರಜ್ಞಾ ಗಲಗಲಿ, ದ್ವಿತೀಯ ಸ್ಥಾನ ಪಡೆದ ವಿ.ಬಿ ದರಬಾರ ಪಿಯು ಕಾಲೇಜಿನ ಸರ್ವಜ್ಞ ಗುರ್ಜಾಲ ಹಾಗೂ ತೃತೀಯ ಸ್ಥಾನ ಪಡೆದ ಶ್ರೀ ಬಿ.ಎಂ.ಪಾಟೀಲ ಕಾಲೇಜಿನ ಕನಿಶಾ ಕಮಲೇಶ ಪೋರವಾಲ, ವಿಜ್ಞಾನ ವಿಭಾಗದಲ್ಲಿ ಕ್ರಮವಾಗಿ ಪ್ರಥಮ ಸ್ಥಾನ ಪಡೆದ ನಗರದ ರೇಡಿಯಂಟ್ ಪಿಯು ಕಾಲೇಜಿನ ನುರಘಾತ ಫಾತಿಮಾ ತಾಳಿಕೋಟಿ, ದ್ವಿತೀಯ ಸ್ಥಾನ ಪಡೆದ ಆಕ್ಸ ಫರ್ಡ್ ಪಿಯು ಕಾಲೇಜಿನ ಲಕ್ಷ್ಮಿ ಪರಸಪ್ಪ ಅಡಿಗಿಮನಿ, ಹಾಗೂ ತೃತೀಯ ಸ್ಥಾನ ಪಡೆದ ಶಾಂತಿನಿಕೇತನ ಪಿಯು ಕಾಲೇಜಿನ ವಿದ್ಯಾಶ್ರೀ ಪ್ರಕಾಶ ಕಾಮನಕೇರಿ, ಆಕ್ಸ ಫರ್ಡ್ ಪಿಯು ಕಾಲೇಜಿನ ಭಾಗ್ಯ ಪುಂಡಲಿಕಪ್ಪ ಹೊಸಮನಿ, ಇದೇ ಕಾಲೇಜಿನ ನಂದಿತಾ, ಶಾಂತಿನಿಕೇತನ ಪಿಯು ಕಾಲೇಜಿನ ಪೂಜಾ ಈಟಿ, ತುಂಗಳ ಸೈನ್ಸ್ ಪಿಯು ಕಾಲೇಜಿನ ಪೃಥ್ವಿ ಪತ್ತಾರ, ಸೇಂಟ್ ಜೋಸೆಫ್ ಪಿಯು ಕಾಲೇಜಿನ ಸಿದ್ದಿ ಜಿ ತೋನ್ನಿ ವಾಲ್ ಹಾಗೂ ತುಂಗಳ ಸೈನ್ಸ್ ಪಿಯು ಕಾಲೇಜಿನ ಸುಶ್ಮಿತಾ ಈರಪ್ಪ ಕೊಪ್ಪಳ ನಿದರ್ಶನವಾಗಿದ್ದಾರೆ ಎಂದರು.

ಇದಕ್ಕೂ ಮುನ್ನ ಜಿಲ್ಲಾಧಿಕಾರಿಗಳಾದ ಡಾ. ಆನಂದ .ಕೆ. ಅವರು ಕ್ರಮವಾಗಿ ಜಿಲ್ಲೆಗೆ ಸ್ಥಾನ ಪಡೆದ ಈ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ, ಸ್ಮರಣಿಕೆ ಹಾಗೂ ಪುಷ್ಪಗುಚ್ಛ ನೀಡಿ ಗೌರವಿಸಿ ಅಭಿನಂದಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಕೆ. ಹೊಸಮನಿ ಮಾತನಾಡಿ, ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಬಿ.ಪಾಟೀಲ ಅವರು, ಈ ಸಾಧಕ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಆರ್ಥಿಕ ಸಹಾಯ ಒದಗಿಸಿ, ಈ ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಹಾರೈಸಿದ್ದಾರೆ ಎಂದು ಅವರು ಹೇಳಿದರು.

ಸನ್ಮಾನ ಸ್ವೀಕರಿಸಿದ ವಿದ್ಯಾರ್ಥಿಗಳು ತಮ್ಮ ಯಶಸ್ಸಿಗೆ ಕಾರಣರಾದ ಪೋಷಕರು, ಶಿಕ್ಷಕರು ಹಾಗೂ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾ ರಿಷಿ ಆನಂದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸಿ.ಕೆ.ಹೊಸಮನಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು, ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು, ಪೋಷಕರು ಮತ್ತು ಗಣ್ಯರು ಉಪಸ್ಥಿತರಿದ್ದರು.

ಜಮಖಂಡಿಯಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಭಾರೀ ಅಕ್ರಮ ಆರೋಪ

ಜಮಖಂಡಿ:ಏ.16:

ತಾಲೂಕಿನ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಗಂಭೀರ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ಪತ್ರಿಕಾ ಗೋಷ್ಠಿಯಲ್ಲಿ ಈರಪ್ಪ ಸುತಾರ ಗಂಭೀರ ಆರೋಪಗಳನ್ನು ಹೊರಿಸಿದರು.



ನಗರದ ಖಾಸಗಿ ಹೊಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ನಿಯಮ ಪ್ರಕಾರ ಪೂರ್ಣಾವಧಿ ಅತಿಥಿ ಉಪನ್ಯಾಸಕರು ಇತರೆ ಕಾಲೇಜುಗಳಲ್ಲಿ ಕೆಲಸ ಮಾಡುವಂತಿಲ್ಲ. ಆದರೆ ಹುಣ್ಣೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕೆಲ ಉಪನ್ಯಾಸಕರು ಸಮೀಪದ ಖಾಸಗಿ ಕಾಲೇಜುಗಳಲ್ಲಿಯೂ ಒಂದೇ ವೇಳೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ದಾಖಲೆಗಳೊಂದಿಗೆ ಆರೋಪಿಸಿದರು.

ಬಿ.ಎಲ್.ಡಿ.ಇ ಸಂಸ್ಥೆಯ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಸಹ ಕೆಲ ಉಪನ್ಯಾಸಕರು ಎರಡೂ ಕಡೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಆದೇಶದ ಸ್ಪಷ್ಟ ಉಲ್ಲಂಘನೆ ಎಂದು ಹೇಳಿದರು.

ಇದೇ ವೇಳೆ, ನಕಲಿ ಸೇವಾ ಪ್ರಮಾಣಪತ್ರಗಳ ಮೂಲಕ ಗ್ರೇಸ್ ಮಾರ್ಕ್ಸ್ ಪಡೆಯುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿದ್ದು, ಕೆಲವು ಪ್ರಾಚಾರ್ಯರ ಪಾತ್ರದ ಮೇಲೂ ಅನುಮಾನ ವ್ಯಕ್ತವಾಗಿದೆ. ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ ಮಾಹಿತಿಗೆ ಸರಿಯಾದ ಉತ್ತರ ನೀಡದೇ ವಿಳಂಬ ಮಾಡಲಾಗುತ್ತಿದೆ ಎಂದು ದೂರಿದರು.

ಈ ಹಿನ್ನೆಲೆಯಲ್ಲಿ ಸಂಬಧಪಟ್ಟ ಉಪನ್ಯಾಸಕರನ್ನು ತಕ್ಷಣ ಅಮಾನತು ಮಾಡಿ, ಕ್ರಿಮಿನಲ್ ಪ್ರಕರಣ ದಾಖಲಿಸಿ, ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಭೀಮ ಆರ್ಮಿ ಭಾರತ ಏಕತಾ ಮಿಷನ್ ಜಿಲ್ಲಾಧ್ಯಕ್ಷ ರಮೇಶ್ ಬಳೋಲಗಿಡದ ಮಾತನಾಡಿ, ಕಳೆದ ಮೂರು ತಿಂಗಳಿದ ಈ ವಿಚಾರವಾಗಿ ಹೋರಾಟ ನಡೆಸುತ್ತಿರು

ವುದಾಗಿ ತಿಳಿಸಿದರು. 15 ದಿನಗಳೊಳಗೆ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಇದೇ ವೇಳೆ ಕೆಲವು ವಿದ್ಯಾರ್ಥಿಗಳಿಂದ ಉಪನ್ಯಾಸಕರ ವಿರುದ್ಧ ಕಿರುಕುಳ ಹಾಗೂ ಅಸಭ್ಯ ವರ್ತನೆ ಆರೋಪಗಳು ಬಂದಿರುವುದಾಗಿ ತಿಳಿಸಿ, ಇಂತಹ ಶಿಕ್ಷಕರನ್ನು ತಕ್ಷಣ ಅಮಾನತು ಮಾಡಬೇಕು ಹಾಗೂ ನೀಡಿದ ವೇತನವನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಸಾರ್ವಜನಿಕ ವಲಯದಲ್ಲಿ ಈ ವಿಚಾರ ಗಂಭೀರ ಚರ್ಚೆಗೆ ಗ್ರಾಸವಾಗಬೇಕು ಹಾಗೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆ ಆಗ್ರಹಿಸಿದೆ.

ಪತ್ನಿಯ ಕಾಲು ಕತ್ತರಿಸಿ ಚೀಲದಲ್ಲಿಟ್ಟು ಪೊಲೀಸ್ ಠಾಣೆಗೆ ಬಂದ ದುರುಳ ಪತಿ!

ಪಲ್ನಾಡು(ಆಂಧ್ರಪ್ರದೇಶ): ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬ ತನ್ನ ಪತ್ನಿಯ ಮೇಲೆ ಕೊಡಲಿಯಿಂದ ಭೀಕರವಾಗಿ ಹಲ್ಲೆಗೈದು, ಆಕೆಯ ಕಾಲು ಕತ್ತರಿಸಿ ಚೀಲದಲ್ಲಿಟ್ಟು ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ.

ಆಂಧ್ರದ ಪಲ್ನಾಡು ಜಿಲ್ಲೆಯ ಮುಪ್ಪಳ್ಳ ಮಂಡಲದ ಥೋಂಡಪಿ ಎಂಬ ಗ್ರಾಮದಲ್ಲಿ ಗುರುವಾರ ಘಟನೆ ನಡೆದಿದೆ. ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ವಲ್ಲೆಪು ಲಕ್ಷ್ಮಯ್ಯ ಬಂಧಿತ ಆರೋಪಿಯಾಗಿದ್ದು, ಭೂಲಕ್ಷ್ಮಿ ಹಲ್ಲೆಗೊಳಗಾದ ಪತ್ನಿ ಎಂದು ಪೊಲೀಸರು ತಿಳಿಸಿದ್ದಾರೆ.

ತೊಂಡಪಿ ಗ್ರಾಮದ ಬಿ.ಸಿ.ಕಾಲೊನಿಯ ನಿವಾಸಿಗಳಾದ ಲಕ್ಷ್ಮಯ್ಯ ಮತ್ತು ಭೂಲಕ್ಷ್ಮಿ ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದು, ದಂಪತಿಗೆ ಐದು ಮಂದಿ ಹೆಣ್ಣು ಮಕ್ಕಳಿದ್ದಾರೆ.

ವಿಜಯಪುರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪಿಂಚಣಿದಾರರಿಂದ ಪ್ರತಿಭಟನೆ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ

ವಿಜಯಪುರ,ಏ.16:

ಇಪಿಎಸ್- 95 ರಾಷ್ಟ್ರೀಯ ಸಂಘರ್ಷ ಸಮಿತಿ ವತಿಯಿಂದ ಪಿಂಚಣಿದಾರರು ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿ ಒಂದು ದಿನದ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಿ ಪ್ರತಿಭಟನಾ ಮೆರವಣಿಗೆ ಮುಖಾಂತರ ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಅವರ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿದರು



ಕರ್ನಾಟಕ ಎನ್‌ಎಸಿ ಕಾರ್ಯಾಧ್ಯಕ್ಷ ವೀರಕುಮಾರ ಗಡದ ಮಾತನಾಡಿ, ಸುಪ್ರೀಂ ಕೋರ್ಟ್‌ನ ನಿರ್ಧಾರ ಮತ್ತು ಸರಿಯಾದ ಮಟ್ಟವನ್ನು ಗಮನದಲ್ಲಿಟ್ಟು ಕೊಂಡು 1-9- 2014 ಕ್ಕಿಂತ ಮೊದಲು ಮತ್ತು ನಂತರ ನಿವೃತ್ತ ರಾದ ಇಪಿಎಸ್-95 ಪಿಂಚಣಿ ದಾರರಿಗೆ ಯಾವುದೇ ತಾರತಮ್ಯ ವಿಲ್ಲದೆ ಪಿಂಚಣಿ ಒದಗಿಸಲಾಗಿದೆ. ಇದರಿಂದ ಅವರಿಗೆ ನಿಜವಾದ ಅರ್ಥದಲ್ಲಿ ನ್ಯಾಯ ಸಿಗುತ್ತದೆ. ಎಲ್ಲಾ ಇಪಿಎಸ್-95 ಪಿಂಚಣಿ ದಾರರಿಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು. ಕಳೆದ 10 ವರ್ಷಗಳಿಂದ ಪಿಂಚಣಿ ದಾರರು ಹೋರಾಟದಲ್ಲಿ ತೊಡಗಿ ದ್ದಾರೆ. ದೇಶದ ಇಪಿಎಸ್-95 ಪಿಂಚಣಿ ದಾರರಿಗೆ ಲಭ್ಯವಿರುವ ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ, ಅವರಲ್ಲಿ ಮರಣ ಪ್ರಮಾಣ ಹೆಚ್ಚುತ್ತಲೇ ಇದೆ. ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಯಶಸ್ವಿ ರಾಷ್ಟ್ರ ವ್ಯಾಪಿ ಪ್ರತಿಭಟನಾ ಕಾರ್ಯಕ್ರಮದ

ನಂತರ ಯಾವುದೇ ನಿರ್ದಿಷ್ಟ ನಿರ್ಧಾರಗಳ ಕೊರತೆಯಿಂದಾಗಿ ಪಿಂಚಣಿದಾರರು ಸಂಕಷ್ಟದಲ್ಲಿ ಇದ್ದಾರೆ ಎಂದರು.

ಮುಂಬರುವ ಕ್ಯಾಬಿನೆಟ್ ಸಭೆ ಅಥವಾ ಸಂಸತ್ತಿನ ಪ್ರಸ್ತುತ ಅಧಿವೇಶನದಲ್ಲಿ ನಮ್ಮ ನಾಲ್ಕು ಅಂಶಗಳ ಬೇಡಿಕೆಗಳಿಗೆ ತಕ್ಷಣದ ಅನುಮೋದನೆಯನ್ನು ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಎಸ್.ಜೆ. ಗೌಡರ, ರಫೀಕ್ ಪನಿಬಂದ, ಬಿ.ಆರ್. ರಜಪೂತ, ಗುಡ್ಡಪ್ಪ ತೊಂತನಾಳ, ಮಕಾನದಾರ ಭಾಯಿ ಸರ್ಕಾರ, ಗುರು ಭಟ್, ಎಸ್.ಎಸ್. ಆಲಗುಂಡಿ, ಶ್ರೀಕಾಂತ ಉಮರಾಣಿ, ರಾವಸಾಬ್ ಚಂದುಗಡೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಆಟೋ ಚಾಲಕರ ಸಂಕಟಕ್ಕೆ ಸರ್ಕಾರ ಸ್ಪಂದಿಸಲಿ



ಇದೇ ಪರಿಸ್ಥಿತಿ ಮುಂದುವರಿದರೆ ಆಟೋ ಚಾಲಕರ ಕುಟುಂಬಗಳ ಪರಿಸ್ಥಿತಿ ಚಿಂತಾಜನಕವಾಗಲಿದೆ. ಆತ್ಮಹತ್ಯೆಯಂತಹ ದುಡುಕಿನ ನಿರ್ಧಾರಕ್ಕೆ ಮುಂದಾದರೂ ಅಚ್ಚರಿಯಿಲ್ಲ. ಚುನಾವಣೆಯಲ್ಲಿ ಹಣ ಹಂಚುವ ರಾಜಕಾರಣಿಗೆ ತಮ್ಮ ಕ್ಷೇತ್ರದ ಮತದಾರರು ಸಂಕಷ್ಟದಲ್ಲಿರುವಾಗ ಸ್ಪಂದಿಸುವ ಮೂಲಕ ನಿಜ ನಾಯಕರಾಗಬೇಕಿದೆ. ಸರ್ಕಾರ ತಕ್ಷಣ ಆಟೋ ಚಾಲಕರ ಸಮಸ್ಯೆಗಳಿಗೆ ಸ್ಪಂದಿಸುವ ಅಗತ್ಯವಿದೆ.

ಫೆಬ್ರವರಿ 28ರಂದು ಶುರುವಾದ ಮಧ್ಯಪ್ರಾಚ್ಯ ಯುದ್ಧ ಹಲವು ದೇಶಗಳ ಮೇಲೆ ನೇರವಾಗಿ ಪರಿಣಾಮ ಬೀರಿದೆ. ಯುದ್ಧ ನಡೆದ ದೇಶಗಳಲ್ಲಿ ಜೀವಹಾನಿ, ಆಸ್ತಿಪಾಸ್ತಿ ನಷ್ಟ ಒಂದು ಕಡೆಯಾದರೆ, ಯುದ್ಧದಲ್ಲಿ ಭಾಗಿಯಾಗದ ದೇಶಗಳ ಜನರೂ ಪರೋಕ್ಷವಾಗಿ ಕಷ್ಟ ನಷ್ಟಗಳಿಗೆ ತುತ್ತಾಗಿದ್ದಾರೆ. ಒಂದು ಕಡೆ ವಿಪರೀತ ಬೆಲೆ ಏರಿಕೆ, ಮತ್ತೊಂದು ಕಡೆ ಇಂಧನದ ಅಭಾವ. ಇವೆಲ್ಲದರ ಮಧ್ಯೆ ಹೋಟೆಲ್ ಉದ್ಯಮ, ಖಾಸಗಿ ಸಾರಿಗೆ ವ್ಯವಸ್ಥೆ ನೆಲಕಚ್ಚಿದೆ. ಸಾವಿರಾರು ಹೋಟೆಲ್ ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಆಟೋ ಓಡಿಸಿ ಬದುಕುತ್ತಿದ್ದ ಕುಟುಂಬಗಳ ಸಂಕಟ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ.

ಯುದ್ಧ ಆರಂಭವಾದ ಒಂದೇ ವಾರದಲ್ಲಿ ಆಟೋ ಗ್ಯಾಸ್ ಕೊರತೆ ಉಂಟಾಗಿತ್ತು. ಕರ್ನಾಟಕದಲ್ಲೂ ಆಟೋ ಚಾಲಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈಗಲೂ ಆಟೋ ಗ್ಯಾಸ್ ಬಂಕ್‌ಗಳ ಮುಂದೆ ಮೈಲಿಗಟ್ಟಲೆ ಆಟೋಗಳು ಮಧ್ಯರಾತ್ರಿಯವರೆಗೆ ಸಾಲುಗಟ್ಟಿ ನಿಂತ ದೃಶ್ಯ ಸರ್ವೇಸಾಮಾನ್ಯವಾಗಿದೆ. ಅದರ ಜೊತೆಗೆ ದರ ಹೆಚ್ಚಳದ ಬಿಸಿಯೂ ಸೇರಿ ಆಟೋ ಚಾಲಕರ ಹೊಟ್ಟೆ ಮೇಲೆ ಹೊಡೆತ ಬಿದ್ದಿದೆ. ಯುದ್ಧ ಆರಂಭವಾಗುವುದಕ್ಕೂ ಮುನ್ನ ರೂ.69ರ ಆಸುಪಾಸು ಇದ್ದ ಗ್ಯಾಸ್ ದರ ಏಕಾಏಕಿ ಮನಬಂದಂತೆ ಏರಿಕೆ ಮಾಡಲಾಗಿದೆ. ರೂ.120ರವರೆಗೂ ಮಾರಾಟ ಮಾಡಲಾಗುತ್ತಿದೆ. ಇದು ನಿಜಕ್ಕೂ ಅಡಿಗೆ ಬಿದ್ದವನ ಮೇಲೆ ಆಳಿಗೊಂದು ಕಲ್ಲು ಎಂಬಂತಾಗಿದೆ. ಮೊದಲೇ ಗ್ಯಾಸ್ ಸಿಗದೇ ದಿನದ ದುಡಿಮೆ ಕಳೆದುಕೊಂಡಿದ್ದ ಚಾಲಕರಿಗೆ ಮತ್ತಷ್ಟು ಹೊರೆಯಾಗಿದೆ.

ಬೆಂಗಳೂರಿನಲ್ಲಿ ಮೆಟ್ರೋ ಶುರುವಾದಾಗ ಆಟೋ ಚಾಲಕರಿಗೆ ಹೊಡೆತ ಬೀಳಲಿದೆ ಎಂಬ ಆತಂಕ ಸೃಷ್ಟಿಯಾಗಿತ್ತು. ಮೂರು ವರ್ಷದ ಹಿಂದೆ ಮಹಿಳೆಯರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಶುರುವಾದಾಗ ಮತ್ತಷ್ಟು ಆತಂಕ ಶುರುವಾಗಿತ್ತು. ಆ ನಂತರ ''ಬೈಕ್ ಟ್ಯಾಕ್ಸಿ ನಮ್ಮ ದುಡಿಮೆಗೆ ಕಲ್ಲು ಹಾಕಿದೆ'' ಎಂಬ ಆರೋಪ ಕೇಳಿ ಬಂದಿತ್ತು. ಆದರೂ ಹೇಗೋ ಆಟೋ ಓಡಿಸಿ ಬದುಕು ನಡೆಸಿರುವ ವರ್ಗಕ್ಕೆ ಹೊಸ ಸವಾಲು ಎದುರಾಗಿದೆ. ಆದರೆ, ಚುನಾವಣೆಯ ಸಮಯದಲ್ಲಿ ಆಮಿಷವೊಡ್ಡಿ ಹಣ, ಸರಕುಗಳನ್ನು ಹಂಚುವ ರಾಜಕಾರಣಿಗಳು, ಶಾಸಕರು, ಸಂಸದರು ಮಂತ್ರಿಗಳು ಆಟೋ ಚಾಲಕರ ನೋವಿಗೆ ಸ್ಪಂದಿಸುತ್ತಿಲ್ಲ ಎಂಬುದು ನಿಜಕ್ಕೂ ದುಃಖದ ಸಂಗತಿ. ಗ್ಯಾಸ್ ಕೊರತೆಗೆ ರಾಜ್ಯ ಸರ್ಕಾರವಾಗಲಿ ಅಥವಾ ಜನ ಪ್ರತಿನಿಧಿಗಳಾಗಲಿ ಬದಲಿ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಆದರೆ, ಅವರ ಬದುಕಿಗೆ ನೆರವಾಗುವ ಮಾನವೀಯತೆ ತೋರುವ ಅಗತ್ಯವಿದೆ.

ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು, ಸಾಲ ಮಾಡಿ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿರುವ ಆಟೋ ಕುಟುಂಬಗಳು ಲಕ್ಷಾಂತರ ಇವೆ. ದಿನಕ್ಕೆ ಸಾವಿರ ರೂಪಾಯಿ ದುಡಿದರೆ ಅದರಲ್ಲಿ ಅರ್ಧದಷ್ಟು ಸಾಲಕ್ಕೆ, ಮನೆ ಖರ್ಚಿಗೆ ವ್ಯಯವಾಗುತ್ತದೆ. ಅದರ ಮಧ್ಯೆ ಕುಟುಂಬದ ನಿರ್ವಹಣೆ, ಮಕ್ಕಳ ಶಿಕ್ಷಣ ಮದುವೆ ಹೀಗೆ ನೂರೆಂಟು ಕರ್ತವ್ಯಗಳಿರುತ್ತವೆ. ಈಗ ದುಡಿಮೆ ನೆಲಕಚ್ಚಿದ ದುಃಸ್ಥಿತಿ ಬಂದೊದಗಿದೆ. ಮುಂದಿನ ತಿಂಗಳು ಮಕ್ಕಳಿಗೆ ಶಾಲೆಗಳಿಗೆ ದಾಖಲಾತಿ, ಪುಸ್ತಕ ಖರೀದಿ, ಫೀಸು ಹೀಗೆ ಹಣ ಹೊಂದಿಸಬೇಕಾದ ಅಗತ್ಯ. ದುಡಿಮೆಗೆ ಕಲ್ಲು ಬಿದ್ದ ಇಂತಹ ಸಂಕಷ್ಟದ ಸಮಯದಲ್ಲಿ ಸರ್ಕಾರ ಆಟೋ ಕುಟುಂಬಗಳ ನೆರವಿಗೆ ಧಾವಿಸಬೇಕಿದೆ. ಆ ಕುಟುಂಬಗಳ ಹಸಿವು ನೀಗಿಸುವ ಕೆಲಸವನ್ನಾದರೂ ಸರ್ಕಾರ ಮಾಡಬೇಕಿದೆ. ದಿನಸಿ ಕಿಟ್‌ಗಳನ್ನು ನೀಡುವ ಮೂಲಕ ಅಥವಾ ಹಣಕಾಸಿನ ಸಬ್ಸಿಡಿ ನೀಡುವ ಮೂಲಕ ಬಡ ಕುಟುಂಬಗಳ ರಕ್ಷಣೆಗೆ ಮುಂದಾಗಬೇಕಿದೆ. ಈಗಾಗಲೇ ಕೆಲವು ಖಾಸಗಿ ಸಂಸ್ಥೆಗಳು ವ್ಯಕ್ತಿಗಳು, ಸಿನಿಮಾ ನಟರು ಕೆಲವು ಕಡೆ ಕಿಟ್ ವಿತರಣೆ ಮಾಡಿದ್ದಾರೆ.

ಯುದ್ಧ ಆರಂಭಕ್ಕೂ ಮುನ್ನ ಬೆಂಗಳೂರು ನಗರವೊಂದಕ್ಕೆ ನಾಲ್ಕು ಟನ್ ಎಲ್‌ಪಿಜಿ ಪೂರೈಕೆಯಾಗುತ್ತಿತ್ತು. ಅದೀಗ ಎರಡು ಟನ್‌ಗೆ ಇಳಿದಿದೆ. ಪೂರೈಕೆ ಇಲ್ಲದ ಕಾರಣ ನಗರದಲ್ಲಿ ಅರ್ಧದಷ್ಟು ಬಂಕ್‌ಗಳು ಮುಚ್ಚಿವೆ. ಬಂಕ್‌ಗಳು ಸರ್ಕಾರ ನಿಗದಿ ಮಾಡಿದ ಬೆಲೆಗೆ ಮಾರಾಟ ಮಾಡುತ್ತಿಲ್ಲ. ದುಪ್ಪಟ್ಟು ಬೆಲೆಗೆ ಗ್ಯಾಸ್ ಹಾಕಿಸಿಕೊಂಡ ಚಾಲಕರು ಸಹಜವಾಗಿಯೇ ಪ್ರಯಾಣಿಕರಿಂದ ಹೆಚ್ಚು ಹಣ ನಿರೀಕ್ಷೆ ಮಾಡುತ್ತಾರೆ. ಹೆಚ್ಚು ಹಣ ತೆರಲಾಗದ ಮಂದಿ ಆಟೋ ಪ್ರಯಾಣವನ್ನು ತಗ್ಗಿಸಿದ್ದಾರೆ. ಗ್ಯಾಸ್ ಸಿಕ್ಕರೂ, ಗ್ರಾಹಕರು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಿಗದಿತ ದರಕ್ಕಿಂತ ಹೆಚ್ಚಿಗೆ ವಸೂಲಿ ಮಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮವನ್ನೂ ಜರುಗಿಸುತ್ತಿಲ್ಲ. ಇತ್ತ ಆಟೋ ಚಾಲಕರ ನೆರವಿಗೂ ಬರುತ್ತಿಲ್ಲ. ಇದು ನಿಜಕ್ಕೂ ಅನ್ಯಾಯ.

ಯುದ್ಧ ಯಾವಾಗ ನಿಲ್ಲುತ್ತದೆ, ಯಾವಾಗ ಇಂಧನ ಪೂರೈಕೆ ಸಹಜ ಸ್ಥಿತಿಗೆ ಬರಲಿದೆ ಎಂಬುದು ಖಾತ್ರಿ ಇಲ್ಲ. ಸಹಜ ಸ್ಥಿತಿಗೆ ಬಂದರೂ ದುಡಿಮೆ ಇಲ್ಲದ ಈ ದಿನಗಳಲ್ಲಿ ಆದ ನಷ್ಟ ಸಾಲದ ರೂಪದಲ್ಲಿ ಕಾಡಲಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಆಟೋ ಚಾಲಕರ ಪರಿಸ್ಥಿತಿ ಚಿಂತಾಜನಕವಾಗಲಿದೆ. ಆತ್ಮಹತ್ಯೆಗಳಂತಹ ದುರಂತಗಳು ನಡೆಯಕೂಡದು. ಚುನಾವಣೆಯಲ್ಲಿ ಹಣ ಹಂಚುವ ರಾಜಕಾರಣಿಗೆ ತಮ್ಮ ಕ್ಷೇತ್ರದ ಮತದಾರರು ಸಂಕಷ್ಟದಲ್ಲಿರುವಾಗ ಸ್ಪಂದಿಸುವ ಮೂಲಕ ನಿಜ ನಾಯಕರಾಗಬೇಕಿದೆ. ಸರ್ಕಾರ ತಕ್ಷಣ ಆಟೋ ಚಾಲಕರ ಸಮಸ್ಯೆಗಳಿಗೆ ಸ್ಪಂದಿಸುವ ಅಗತ್ಯವಿದೆ.

ತಮಿಳುನಾಡು ಚುನಾವಣೆ

ಅಭಿಮಾನದ ಅಲೆಯಷ್ಟೇ ವಿಜಯಕ್ಕೆ ಸಾಕೆ?

ತಮಿಳುನಾಡಿನಲ್ಲಿ ತಮಿಳಗ ವೆಟ್ರಿ ಕಳಗಂ () ಪಕ್ಷ 2026ರ ವಿಧಾನಸಭಾ ಚುನಾವಣೆಗೆ ಧುಮುಕಿರುವುದು ಈಗ ಸಿನೆಮಾ ನಂಟಿಗೆ ಮರುಜೀವ ನೀಡಿದೆ. ಡಿಎಂಕೆ ಪಕ್ಷಕ್ಕೆ ಉದಯನಿಧಿ ಸ್ಟ್ಯಾಲಿನ್ ಅವರನ್ನು ವಿಜಯ್ ಗೆ ಸರಿಸಾಠಿ ಎಂಬಂತೆ ಸೇರ್ಪಡೆ ಮಾಡಿಕೊಳ್ಳಲಾಯಿತು. ಆದರೇ, ಅದು ನಿರೀಕ್ಷೆಯ ಮಟ್ಟ ತಲುಪಲಿಲ್ಲ. ವಿಜಯ್ ನೇತೃತ್ವದ ಟಿವಿಕೆ ಸುಮಾರು ಶೇ. 10 ರಿಂದ 15ರಷ್ಟು ಮತ ಹಂಚಿಕೆ ಪಡೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಇದು ವಿಜಯಕ್ಕೆ ಸಾಕಾಗದೇ ಇರಬಹುದು, ಆದರೆ ಕಿಂಗ್ ಮೇಕರ್ ಆಗಲು ಸಾಕಷ್ಟಾಯ್ತು.

ತಮಿಳುನಾಡಿನ ರಾಜಕೀಯ ತಮಿಳು ಅಸ್ಮಿತೆ, ಭಾಷಾಭಿಮಾನ, ಸಾಮಾಜಿಕ ಸಮಾನತೆ, ಜಾತಿ ಪದ್ಧತಿಯ ನಿರ್ಮೂಲನೆ ಮತ್ತು ಸಿನೆಮಾದೊಂದಿಗೆ ದಶಕಗಳ ನಂಟನ್ನು ಹೊಂದಿದೆ. ಇವೇ ತಮಿಳುನಾಡಿನ ರಾಜಕೀಯವನ್ನು ಪೊರೆಯುತ್ತಾ ಬಂದಿದೆ.

ತಮಿಳುನಾಡಿನ ರಾಜಕೀಯ ರಂಗಕ್ಕೆ ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ () ಪಕ್ಷ 2026ರ ವಿಧಾನಸಭಾ ಚುನಾವಣೆಗೆ ಧುಮುಕಿರುವುದು ಈಗ ಸಿನೆಮಾ ನಂಟಿಗೆ ಮರುಜೀವ ನೀಡಿದೆ.

ರಜನಿಕಾಂತ್ ಕೂಡ 2021ರಲ್ಲಿ ರಾಜಕೀಯಕ್ಕೆ ಬರಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ, ಅವರು ಮನಸ್ಸು ಮಾಡಿರಲಿಲ್ಲ. 2016 ರಲ್ಲಿ ಜೆ. ಜಯಲಲಿತಾ ಮತ್ತು 2018ರಲ್ಲಿ ಎಂ. ಕರುಣಾನಿಧಿ ಅವರ ನಿಧನದ ಬಳಿಕ, ಆ ಎರಡೂ ಪಕ್ಷಗಳನ್ನು ಸಿನಿಮಾ ರಂಗದೊಂದಿಗೆ ಬಹಳ ದೊಡ್ಡ ನಂಟು ಇಲ್ಲದವರೇ ಮುನ್ನಡೆಸುತ್ತಿದ್ದಾರೆ. ಇದೇ ಕಾರಣದಿಂದ ವಿಜಯ್ ರಾಜಕೀಯ ಪ್ರವೇಶವ ತಮಿಳುನಾಡು ರಾಜಕೀಯದಲ್ಲಿ ಹೊಸ ಸಂಚಲನ ಮೂಡಿಸಿತ್ತು. ಅವರ ರಾಜಕೀಯ ಪ್ರವೇಶದ ಪ್ರಾಥಮಿಕ ಹೆಜ್ಜೆಗಳಲ್ಲೇ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು ಎನ್ನುವುದು ಕೂಡ ಇಲ್ಲಿ ಉಲ್ಲೇಖನೀಯ.

ತಮಿಳು ಸಿನಿಮಾರಂಗದಲ್ಲಿ ಚಿತ್ರಕಥೆಗಾರರಾಗಿ ಸಿ.ಎನ್. ಅಣ್ಣಾದೊರೈ ಹಾಗೂ ಕರುಣಾನಿಧಿ ಅವರು, ಖ್ಯಾತಿ ಗಳಿಸಿದವರು. ಎಂಜಿಆರ್ ಎಂದೇ ಜನಪ್ರಿಯರಾಗಿದ್ದ ಎಂ.ಜಿ. ರಾಮಚಂದ್ರನ್ ಅವರೂ 1972ರ ವರೆಗೆ ಡಿಎಂಕೆ ಪಕ್ಷದಲ್ಲೇ ಇದ್ದವರು.

ಸಿನೆಮಾ ಖ್ಯಾತಿಯ ಜೊತೆಗೆ ತಮಿಳು ಅಸ್ಮಿತೆಗಾಗಿ ಧ್ವನಿ ಎತ್ತುವಲ್ಲೂ ಪ್ರಮುಖ ಪಾತ್ರವಹಿಸಿದರು. ಈ ಮೂಲಕವೇ ಸಾರ್ವಜನಿಕರಿಗೆ ಹತ್ತಿರವಾದರು. ಕರುಣಾನಿಧಿ ಅವರು, ಶಿವಾಜಿ ಗಣೇಶನ್, ಎಂಜಿಆರ್ ಅವರಂತಹ ನಟರನ್ನು ರಾಜಕೀಯ ನಾಯಕರನ್ನಾಗಿಸುವ ಪ್ರಭಾವಶಾಲಿ ಭಾಷಣ, ಸಂಭಾಷಣೆಗಳನ್ನು ಬರೆಯುವ ಕೆಲಸ ಮಾಡಿದ್ದರು.

ಜಯಲಲಿತ ಮತ್ತು ಕರುಣಾನಿಧಿ ಬಳಿಕ ಸಿನೆಮಾದ ನಂಟು ಕಳೆದುಕೊಂಡ ತಮಿಳು ರಾಜಕೀಯದಲ್ಲಿ ರಜನಿಕಾಂತ್ ರಾಜಕೀಯಕ್ಕೆ ಪ್ರವೇಶಿಸಲು ಯತ್ನಿಸಿ ವಾಪಾಸ್ ಮರಳಿದರು, ಕಮಲ್ ಹಾಸನ್ ಯಶಸ್ಸು ಕಾಣಲಿಲ್ಲ. ನಟರಾದ ವಿಜಯಕಾಂತ್, ಶರತ್ ಕುಮಾರ್, ಸೀಮನ್ ಅವರೂ ರಾಜಕೀಯದಲ್ಲಿ ಛಾಪು ಮೂಡಿಸಲು ಪ್ರಯತ್ನಿಸಿದ್ದರು. ಈ ಪೈಕಿ, ವಿಜಯಕಾಂತ್ ಅವರಷ್ಟೇ ಅಲ್ಪಮಟ್ಟಿನ ಯಶಸ್ಸು ಸಾಧಿಸಿದ್ದರು. ಅವರ ದೇಸಿಯ ಮುರ್ಪೋಕ್ಕು ದ್ರಾವಿಡ ಕಳಗಂ (ಡಿಎಂಡಿಕೆ), ಆರಂಭದಲ್ಲಿ ಅಲ್ಪ ಮಟ್ಟಿಗೆ ಯಶಸ್ಸು ಕಂಡಿತ್ತು. ವಿಜಯಕಾಂತ್ ನಿಧನದ ನಂತರ (2023ರಲ್ಲಿ) ಪಕ್ಷದ ಹೊಣೆ ಹೊತ್ತುಕೊಂಡಿರುವ ಅವರ ಪತ್ನಿ ಪ್ರೇಮಲತಾ, ಡಿಎಂಕೆಗೆ ಬೆಂಬಲ ಘೋಷಿಸಿದ್ದಾರೆ. ಸೀಮನ್ ಅವರ ಎನ್ಟಿಕೆ ಏಕಾಂಗಿಯಾಗಿ ಚುನಾವಣೆಯನ್ನು ಎದುರಿಸುತ್ತಿದೆ. ಆದರೇ, ವಿಜಯ್ ಸದ್ದು ಮಾಡಿದಷ್ಟು ಮಾಡುತ್ತಿಲ್ಲ. ಡಿಎಂಕೆ ಪಕ್ಷಕ್ಕೆ ಉದಯನಿಧಿ ಸ್ಟ್ಯಾಲಿನ್ ಅವರನ್ನು ವಿಜಯ್ ಗೆ ಸರಿಸಾಠಿ ಎಂಬಂತೆ ಸೇರ್ಪಡೆ ಮಾಡಿಕೊಳ್ಳಲಾಯಿತು. ಆದರೇ, ಅದು ನಿರೀಕ್ಷೆಯ ಮಟ್ಟ ತಲುಪಲಿಲ್ಲ.

ವಿಜಯ್ ಅನೇಕ ಏಳುಬೀಳುಗಳ ನಡುವೆ ರಾಜಕೀಯದಲ್ಲಿ ಸಾಧಿಸಿಯೇ ತಿರುತ್ತೇನೆ ಎಂದು ದ್ರಾವಿಡ ಪಕ್ಷಗಳ ಮುಂದೆ ತೊಡೆ ತಟ್ಟಿ ನಿಂತಿದ್ದರೂ, ತಮಿಳು ಅಸ್ಮಿತೆಯ ಧ್ವನಿಯಾಗಿ ಕಾಣಿಸಿಕೊಳ್ಳುತ್ತಿಲ್ಲ. ರಾಜಕೀಯದಲ್ಲಿ ಉಳಿದ ಪಕ್ಷಗಳು ಮಾಡುತ್ತಿರುವ ತೀರಾ ಸಾಮಾನ್ಯ ತಂತ್ರಗಾರಿಕೆಯಂತೆಯೇ ವಿಜಯ್ ಅವರ ಟಿವಿಕೆ ಕೂಡ ಮಾಡುತ್ತಿದೆ.



ಮಹಿಳೆಯರ ಓಲೈಕೆಗೆ ಯತ್ನ

ಟಿವಿಕೆ ಪಕ್ಷದ ಪ್ರಣಾಳಿಕೆಯಲ್ಲಿ ಮಹಿಳೆಯರಿಗಾಗಿ ಆರ್ಥಿಕ ನೆರವು ಮತ್ತು ಸುರಕ್ಷತೆಯ ಭರವಸೆಗಳನ್ನು ನೀಡಲಾಗಿದೆ. ಸರ್ಕಾರಿ ಶಾಲಾ ಮಕ್ಕಳ ತಾಯಂದಿರಿಗೆ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ವಾರ್ಷಿಕ 15,000 ರೂ. ಸಹಾಯಧನ. 60 ವರ್ಷದ ಒಳಗಿನ ಅರ್ಹ ಮಹಿಳೆಯರಿಗೆ (ಸರ್ಕಾರಿ ನೌಕರರ ಕುಟುಂಬ ಹೊರತುಪಡಿಸಿ) ಪ್ರತಿ ತಿಂಗಳು 2,500 ರೂ. ಆರ್ಥಿಕ ಸಹಾಯ. ತಮಿಳುನಾಡಿನಾದ್ಯಂತ ಸರ್ಕಾರಿ ಬಸ್ಗಳಲ್ಲಿ ಮಹಿಳೆಯರಿಗೆ ಸಂಪೂರ್ಣ ಉಚಿತ ಪ್ರಯಾಣ. ಬಡ ಕುಟುಂಬದ ಹೆಣ್ಣುಮಕ್ಕಳ ಮದುವೆಗೆ 8 ಗ್ರಾಂ ಚಿನ್ನ ಮತ್ತು ಗುಣಮಟ್ಟದ ರೇಷ್ಮೆ ಸೀರೆಯನ್ನು ನೀಡುವ ಭರವಸೆ. ಮಹಿಳಾ ಸ್ವಸಹಾಯ ಸಂಘಗಳಿಗೆ 5 ಲಕ್ಷದವರೆಗೆ ಬಡ್ಡಿರಹಿತ ಸಾಲ. ಪ್ರತಿ ಕುಟುಂಬಕ್ಕೆ ವರ್ಷಕ್ಕೆ 6 ಉಚಿತ ಎಲ್ಪಿಜಿ ಸಿಲಿಂಡರ್ ವಿತರಣೆ. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ರಕ್ಷಣೆಗಾಗಿ ರಾಣಿ ವೇಲು ನಾಚಿಯಾರ್ ಪಡೆ ಎಂಬ ವಿಶೇಷ ಮಹಿಳಾ ಪೊಲೀಸ್ ಪಡೆಯ ರಚನೆ ಮತ್ತು ತುರ್ತು ಸಂದರ್ಭಗಳಿಗಾಗಿ ಸ್ಮಾರ್ಟ್ ಪ್ಯಾನಿಕ್ ಬಟನ್ ಅಳವಡಿಕೆಯಂತಹ ಭರವಸೆಗಳನ್ನು ನೀಡಲಾಗಿದೆ. ಇವೆಲ್ಲಾ ಇತರೆ ಪಕ್ಷಗಳ ನಕಲಿ ಎಂದೇ ಕಾಣಿಸುತ್ತಿದೆ ಹೊರತು, ಹೊಸತನ ಕಾಣಿಸುತ್ತಿಲ್ಲ. ಸಣ್ಣ ಮತ ಪ್ರಮಾಣವನ್ನು ಸೆಳೆಯಬಹುದು ವಿನಃ ದೊಡ್ಡ ಬದಲಾವಣೆಗೆ ಇದು ಸಾಕ್ಷಿಯಾಗುತ್ತದೆ ಎನ್ನುವ ವಾತಾವರಣ ಕಾಣಿಸುತ್ತಿಲ್ಲ. ಇಷ್ಟಾಗ್ಯೂ, ಟಿವಿಕೆ ಸೆಳೆಯುವ ಶೇ. 8-10ರಷ್ಟು ಮತಪ್ರಮಾಣವೂ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳಿಗೆ ಹೊಡೆತ ನೀಡಬಹುದು ಎನ್ನುವುದರಲ್ಲಿ ಅನುಮಾನವಿಲ್ಲ.

ಸಿನೆಮಾ ಅಭಿಮಾನ ಮತ್ತು ಸಂಘಟನೆಗಳು

ವಿಜಯ್ ಅವರ ರಾಜಕೀಯ ಯಶಸ್ಸಿನಲ್ಲಿ ಅವರ ಅಭಿಮಾನಿ ಸಂಘಟನೆಯಾದ ವಿಜಯ್ ಮಕ್ಕಳ್ ಇಯಕ್ಕಂ () ಪಾತ್ರ ಬಹಳ ದೊಡ್ಡದಿದೆ. ವಿಜಯ್ ಅವರಿಗೆ ರಾಜ್ಯದಾದ್ಯಂತ ಲಕ್ಷಾಂತರ ಅಭಿಮಾನಿಗಳಿದ್ದಾರೆ. ಇವರು ಕೇವಲ ಅಭಿಮಾನಿಗಳಾಗಿ ಉಳಿಯದೆ, ಮನೆಮನೆಗೆ ಭೇಟಿ ನೀಡಿ ಪಕ್ಷದ ಸಿದ್ಧಾಂತ ಮತ್ತು ಗ್ಯಾರಂಟಿಗಳನ್ನು ತಲುಪಿಸುವ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ.

ಈಗಾಗಲೇ ಟಿವಿಕೆ ಪಕ್ಷ ಡಿಜಿಟಲ್ ಸದಸ್ಯತ್ವ ಅಭಿಯಾನದ ಮೂಲಕ ಕೋಟ್ಯಂತರ ಜನರನ್ನು ತಲುಪಿದೆ. ಇದಕ್ಕೆ ಅಭಿಮಾನಿ ಸಂಘಗಳೇ ಬೆನ್ನೆಲುಬಾಗಿ ನಿಂತಿವೆ. ಮೊದಲ ಬಾರಿಗೆ ಮತದಾನ ಮಾಡುವ ಯುವಕರಲ್ಲಿ ವಿಜಯ್ ಮೇಲೆ ಇರುವ ಕ್ರೇಜ್ ಅನ್ನು ಮತಗಳಾಗಿ ಪರಿವರ್ತಿಸಲು ಈ ಸಂಘಟನೆಗಳು ಕೆಲಸ ಮಾಡುತ್ತಿವೆ. 2026ರ ವಿಧಾನಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಮತ ಚಲಾಯಿಸುತ್ತಿರುವ ಯುವ ಮತದಾರರ (18-19 ವರ್ಷದವರು) ಸಂಖ್ಯೆ ಸರಿಸುಮಾರು 12.5 ಲಕ್ಷ. ಸರಿಸುಮಾರು 1 ಕೋಟಿಯಷ್ಟು 20-29ರ ವಯಸ್ಸಿನ ಮತದಾರರಿದ್ದಾರೆ. 2.89 ಕೋಟಿಯಷ್ಟು ಮಹಿಳಾ ಮತದಾರರಿದ್ದಾರೆ. ತಮಿಳುನಾಡಿನಲ್ಲಿರುವ ಒಟ್ಟು 5.67 ಕೋಟಿಯಷ್ಟಿರುವ ನೋಂದಾಯಿತ ಮತದಾರರಲ್ಲಿ ಕನಿಷ್ಟ ಶೇ. 5-8 ಮತ ಸೆಳೆದರೂ ಡಿಎಂಕೆ, ಎಐಎಡಿಎಂಕೆ ಪಕ್ಷಗಳಿಗೆ ಹೊಡೆತ ನೀಡಬಹುದು ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ, ವಿಜಯ್ ನೇತೃತ್ವದ ಪಕ್ಷಕ್ಕೆ ಸ್ಪಷ್ಟ ಸಿದ್ಧಾಂತ, ನಿಲುವು ಇಲ್ಲದಿರುವುದು ಮತ್ತು ಕ್ಷೇತ್ರ ಮರುವಿಂಗಡಣೆಯಂತಹ ವಿಷಯಗಳ ಬಗ್ಗೆ ಧ್ವನಿ ಎತ್ತದೆ ಇರುವುದು ತಮಿಳಿಗರಲ್ಲಿ ನಂಬಿಕೆ ಹುಟ್ಟಿಸುತ್ತಿಲ್ಲ ಎನ್ನುವ ಅಭಿಪ್ರಾಯವೂ ಇದೆ.

ಇನ್ನು, ಅಭಿಮಾನದ ಅಲೆಯನ್ನು ಮತಗಳಾಗಿ ಪರಿವರ್ತಿಸುವುದು ಅವರಿಗೆ ಇರುವ ದೊಡ್ಡ ಸವಾಲು. ಮಹಿಳಾ ಮತದಾರರನ್ನು ಗುರಿಯಾಗಿಸಿಕೊಂಡು ಹಲವು ಯೋಜನೆಗಳನ್ನು ಮುಂದಿಟ್ಟಿದ್ದಾರೆ. ತಮ್ಮ ಅಭಿಮಾನಿ ಸಂಘಟನೆಯನ್ನೇ ರಾಜಕೀಯ ಶಕ್ತಿಯನ್ನಾಗಿ ಬಳಸುತ್ತಿದ್ದಾರೆ. ಆದರೇ, ಸಂಘಟನೆಯಲ್ಲಿರುವವರು ಯಾರು ಕ್ಷೇತ್ರವಾರು ಪಕ್ಷದ ಕಾರ್ಯಕರ್ತರಲ್ಲ. ಹಾಗಾಗಿ ರಾಜಕೀಯದ ಕಾರ್ಯಕರ್ತರ ಕೊರತೆ ಟಿವಿಕೆ ಎದುರಿಸುತ್ತಿದೆ.

ಈ ನಡುವೆ ವಿಜಯ್ ಅವರ ಭರವಸೆಗಳನ್ನು ತಮಿಳುನಾಡಿನ ಜನರು ಎಷ್ಟು ಮಟ್ಟಿಗೆ ಒಪ್ಪುತ್ತಾರೆ ಎಂಬುದು 2026ರ ಚುನಾವಣೆಯ ಅತ್ಯಂತ ಕುತೂಹಲಕಾರಿ ಪ್ರಶ್ನೆ. ತಮಿಳುನಾಡು ಈಗಾಗಲೇ ಸಾಲದ ಸುಳಿಯಲ್ಲಿದೆ(9.52 ಲಕ್ಷ ಕೋಟಿ ರೂ.). ವಿಜಯ್ ಘೋಷಿಸಿರುವ ಈ ಭಾರಿ ಪ್ರಮಾಣದ ಉಚಿತ ಯೋಜನೆಗಳಿಗೆ ಹಣ ಎಲ್ಲಿಂದ ಬರುತ್ತದೆ ಎಂಬ ತಾಂತ್ರಿಕ ಪ್ರಶ್ನೆ ಸುಶಿಕ್ಷಿತ ಮತದಾರರಲ್ಲಿರುತ್ತದೆ.

ಇನ್ನು, ಡಿಎಂಕೆ ಮತ್ತು ಎಐಎಡಿಎಂಕೆ ತಳಮಟ್ಟದಲ್ಲಿ ಅತ್ಯಂತ ಬಲಿಷ್ಠವಾದ ಸಂಘಟನಾ ಶಕ್ತಿಯನ್ನು ಹೊಂದಿವೆ. ಕೇವಲ ಅಭಿಮಾನ ಮತಗಳಾಗಿ ಬದಲಾಗುತ್ತದೆಯೇ ಎಂಬುದು ದೊಡ್ಡ ಪ್ರಶ್ನೆ. ತಮಿಳು ಜನರು ಸಿನಿಮಾ ತಾರೆಗಳನ್ನು ದೇವರೆಂದು ಆರಾಧಿಸುತ್ತಾರೆ ನಿಜ, ಆದರೆ ಮತ ಹಾಕುವಾಗ ಅವರು ಬಹಳ ಪ್ರಾಯೋಗಿಕವಾಗಿ ಯೋಚಿಸುತ್ತಾರೆ. ಎಂಜಿಆರ್ ಮತ್ತು ಜಯಲಲಿತಾ ಅವರು ಯಶಸ್ವಿಯಾಗಿದ್ದು ಕೇವಲ ನಟರಾಗಿದ್ದಕ್ಕಷ್ಟೇ ಅಲ್ಲ, ಜನಪರ ಧ್ವನಿಯಾಗಿ, ತಮಿಳು ಅಸ್ಮಿತೆಗಾಗಿ ಕೆಲಸ ಮಾಡಿದ್ದಕ್ಕಾಗಿ ಎನ್ನುವುದು ಇಲ್ಲಿ ಉಲ್ಲೇಖನೀಯ.

ಒಟ್ಟಿನಲ್ಲಿ, ಕೆಲವು ಸಮೀಕ್ಷೆಗಳ ಪ್ರಕಾರ, ವಿಜಯ್ ನೇತೃತ್ವದ ಟಿವಿಕೆ ಸುಮಾರು ಶೇ. 10 ರಿಂದ 15ರಷ್ಟು ಮತ ಹಂಚಿಕೆ ಪಡೆಯುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಇದು ವಿಜಯಕ್ಕೆ ಸಾಕಾಗದೇ ಇರಬಹುದು, ಆದರೆ ಕಿಂಗ್ ಮೇಕರ್ ಆಗಲು ಸಾಕಷ್ಟಾಯ್ತು ಎನ್ನುವುದು ಇಲ್ಲಿ ಮುಖ್ಯಾಂಶ.

ಮಹಿಳೆಯರಿಗೆ ಮತ್ತೆ ಮುಚ್ಚಲಿವೆಯೇ ಶಬರಿಮಲೆ ಅಯ್ಯಪ್ಪ ಸ್ವಾಮಿಯ ಬಾಗಿಲುಗಳು?

ಕಾನೂನುಬದ್ಧವಾಗಿ ಮಹಿಳೆಯರ ಪ್ರವೇಶಕ್ಕೆ ತಡೆ ಇಲ್ಲ. ಆದರೆ 9 ನ್ಯಾಯಮೂರ್ತಿಗಳ ಪೀಠವು ನೀಡುವ ಅಂತಿಮ ತೀರ್ಪಿನ ಮೇಲೆ ಎಲ್ಲವೂ ಅವಲಂಬಿತವಾಗಿದೆ. ಆದರೆ ಮಹಿಳೆಯರ ಪರವಾಗಿ ನಿಲ್ಲಬೇಕಾದ ಕೇಂದ್ರ ಸರ್ಕಾರವು ಮಹಿಳಾ ವಿರೋಧಿ ಧೋರಣೆಯನ್ನು ತಳೆದಿದೆ. ಮಹಿಳೆಯರಿಗೆ ಶಬರಿಮಲೆ ಪ್ರವೇಶಕ್ಕೆ ಅವಕಾಶ ನೀಡಬಾರದು. ಇದು ಧಾರ್ಮಿಕ ಸಂಪ್ರದಾಯ ಎಂದು ಸಮರ್ಥಿಸಿಕೊಂಡಿದೆ!

ಶಬರಿಮಲೆ ದೇವಾಲಯಕ್ಕೆ ಮಹಿಳೆಯರ ಪ್ರವೇಶವು ದೇಶದ ಇತಿಹಾಸದಲ್ಲೇ ಒಂದು ವಿವಾದಾತ್ಮಕ ಹೋರಾಟವಾಗಿಯೇ ಉಳಿದಿದೆ. 2018ರಲ್ಲಿ ಶಬರಿಮಲೆಗೆ ಮಹಿಳೆಯರಿಗೂ ಪ್ರವೇಶಕ್ಕೆ ಅವಕಾಶ ನೀಡಿ ಸುಪ್ರೀಂ ಕೋರ್ಟ್ ಆದೇಶಿಸಿದೆ. ಆದರೆ ಇದೀಗ ಮತ್ತೆ ಮಹಿಳೆಯರಿಗೆ ಶಬರಿಮಲೆ ಅಯ್ಯಪ್ಪ ಸ್ವಾಮಿಯ ಬಾಗಿಲುಗಳು ಮುಚ್ಚಲಿವೆಯೇ ಎಂಬ ಪ್ರಶ್ನೆಗಳು ಹುಟ್ಟಿದೆ.

ಈ ಹಿಂದೆ ಬರೀ ಶಬರಿಮಲೆಗೆ ಮಹಿಳೆಯರ ಪ್ರವೇಶಕ್ಕೆ ಸಂಬಂಧಿಸಿದ್ದ ಈ ಪ್ರಕರಣವು ಇಂದು ಬರೀ ಒಂದು ದೇವಾಲಯದ ಪ್ರಕರಣವಾಗಿ ಉಳಿದಿಲ್ಲ. ಬದಲಾಗಿ ಮುಸ್ಲಿಂ ಮಹಿಳೆಯರ ಮಸೀದಿ ಪ್ರವೇಶ, ಪಾರ್ಸಿ ಮಹಿಳೆಯರ ಅಗ್ನಿ ದೇವಾಲಯ ಪ್ರವೇಶ ಮೊದಲಾದವುಗಳ ವಿಚಾರಣೆ ಆಗಿಯೂ ಮಾರ್ಪಟ್ಟಿದೆ. ಸದ್ಯ 9 ನ್ಯಾಯಮೂರ್ತಿಗಳ ಪೀಠದ ಮುಂದಿರುವ ಪ್ರಶ್ನೆಯೇನು, ಸದ್ಯ ನಡೆಯುತ್ತಿರುವುದೇನು?

ಏನಿದು ಶಬರಿಮಲೆ ವಿವಾದ?

ಶಬರಿಮಲೆಯ ಅಯ್ಯಪ್ಪ ಸ್ವಾಮಿಯನ್ನು ನೈಷ್ಠಿಕ ಬ್ರಹ್ಮಚಾರಿ ಎಂದು ಪರಿಗಣಿಸಲಾಗುತ್ತದೆ. ಆದ್ದರಿಂದ 10 ರಿಂದ 50 ವರ್ಷ ವಯಸ್ಸಿನ ಅಂದರೆ ಋತುಸ್ರಾವದ ವಯಸ್ಸಿನ ಮಹಿಳೆಯರಿಗೆ ದೇವಸ್ಥಾನ ಪ್ರವೇಶವನ್ನು ಕೇರಳದ ಹಿಂದೂ ಸಾರ್ವಜನಿಕ ಆರಾಧನಾ ಸ್ಥಳಗಳ (ಪ್ರವೇಶದ ಅಧಿಕಾರ) ನಿಯಮಗಳು, 1965ರ ಅಡಿಯಲ್ಲಿ ನಿರ್ಬಂಧಿಸಲಾಗಿತ್ತು. ಆದರೆ ಸಂವಿಧಾನದ 14ನೇ ವಿಧಿಯ ಪ್ರಕಾರ ಪ್ರತಿಯೊಬ್ಬರಿಗೂ ಸಮಾನತೆಯ ಹಕ್ಕಿದೆ. ಮಹಿಳೆಯರನ್ನು ಕೇವಲ ಅವರ ಜೈವಿಕ ಕಾರಣಗಳಿಗಾಗಿ (ಋತುಚಕ್ರ) ತಾರತಮ್ಯ ಮಾಡುವುದು ಸಂವಿಧಾನಬಾಹಿರ ಎಂದು ಹೇಳಿ ಈ ನಿರ್ಬಂಧವನ್ನು ಪ್ರಶ್ನಿಸಿ ಯಂಗ್ ಲಾಯರ್ಸ್ ಅಸೋಸಿಯೇಷನ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಅರ್ಜಿ ಸಲ್ಲಿಕೆಯು ದೇಶಾದ್ಯಂತ ತೀವ್ರ ಚರ್ಚೆಗೆ ನಾಂದಿ ಹಾಡಿತು. ಪರ-ವಿರೋಧಗಳು ಕೇಳಿಬಂದವು.

2018ರ ಐತಿಹಾಸಿಕ ತೀರ್ಪು

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು 2018ರ ಸೆಪ್ಟೆಂಬರ್ 28ರಂದು 4:1 ಬಹುಮತದೊಂದಿಗೆ ಮಹತ್ವದ ತೀರ್ಪು ನೀಡಿತು. ''ಯಾವುದೇ ವಯಸ್ಸಿನ ನಿರ್ಬಂಧವಿಲ್ಲದೆ ಎಲ್ಲ ಮಹಿಳೆಯರಿಗೂ ಶಬರಿಮಲೆ ಪ್ರವೇಶಕ್ಕೆ ಅವಕಾಶ ನೀಡಬೇಕು. ಜೈವಿಕ ಕಾರಣಗಳಿಗಾಗಿ ಮಹಿಳೆಯರನ್ನು ದೂರವಿಡುವುದು ಸಂವಿಧಾನದ ವಿಧಿ 14 (ಸಮಾನತೆ) ಮತ್ತು ವಿಧಿ 25ರ (ಧಾರ್ಮಿಕ ಸ್ವಾತಂತ್ರ್ಯ) ಉಲ್ಲಂಘನೆಯಾಗಿದೆ'' ಎಂದು ಸುಪ್ರೀಂ ಕೋರ್ಟ್ ಹೇಳಿತು.

ಈ ಪೀಠದಲ್ಲಿದ್ದ ಅಂದಿನ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ, ''ಎಲ್ಲ ವಯೋಮಾನದ ಮಹಿಳೆಯರಿಗೆ ಪ್ರವೇಶ ನೀಡಬೇಕು'' ಎಂದು ತೀರ್ಪು ನೀಡಿದರು. ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್, ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಆರ್. ಎಫ್. ನಾರಿಮನ್ ಈ ತೀರ್ಪಿಗೆ ಬೆಂಬಲ ನೀಡಿದರು. ಆದರೆ ಪೀಠದಲ್ಲಿದ್ದ ಏಕೈಕ ಮಹಿಳಾ ನ್ಯಾಯಮೂರ್ತಿ ಇಂದು ಮಲ್ಹೋತ್ರಾ, ಶಬರಿಮಲೆಗೆ ಮಹಿಳೆಯರ ಪ್ರವೇಶಕ್ಕೆ ವಿರೋಧ ವ್ಯಕ್ತಪಡಿಸಿದ್ದರು! ''ಧಾರ್ಮಿಕ ಆಚರಣೆಗಳಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡಬಾರದು'' ಎಂದು ಹೇಳಿಕೊಂಡಿದ್ದರು. ಪುರುಷ ನ್ಯಾಯಮೂರ್ತಿಗಳು ಮಹಿಳಾ ಸಮಾನತೆಯನ್ನು ಸಾರಿದಾಗ, ಮಹಿಳಾ ನ್ಯಾಯಮೂರ್ತಿ ಮಾತ್ರ ವಿಭಿನ್ನ ನಿಲುವು ತಾಳಿದ್ದು ತೀವ್ರ ಚರ್ಚೆಗೆ ಒಳಗಾಗಿತ್ತು.

2019ರ ಮರುಪರಿಶೀಲನಾ ಅರ್ಜಿಗಳು

2018ರ ತೀರ್ಪನ್ನು ವಿರೋಧಿಸಿ ಸುಮಾರು 65ಕ್ಕೂ ಹೆಚ್ಚು ಮರುಪರಿಶೀಲನಾ ಅರ್ಜಿಗಳು ಸಲ್ಲಿಕೆಯಾದವು. 2019ರ ನವೆಂಬರ್ 14ರಂದು ಸುಪ್ರೀಂ ಕೋರ್ಟ್ ಈ ಮರುಪರಿಶೀಲನಾ ಅರ್ಜಿಗಳ ವಿಚಾರಣೆ ನಡೆಸುತ್ತಾ ಈ ವಿವಾದವು ಕೇವಲ ಒಂದು ದೇವಸ್ಥಾನಕ್ಕೆ ಸೀಮಿತವಾಗಿಲ್ಲ ಎಂದು ಅಭಿಪ್ರಾಯಪಟ್ಟಿತು.

ಮುಸ್ಲಿಂ ಮಹಿಳೆಯರ ಮಸೀದಿ ಪ್ರವೇಶ, ಪಾರ್ಸಿ ಮಹಿಳೆಯರ ಅಗ್ನಿ ದೇವಾಲಯ ಪ್ರವೇಶ ಮತ್ತು ದಾವೂದಿ ಬೊಹ್ರಾ ಸಮುದಾಯದ ಸ್ತ್ರೀ ಸುನ್ನತ್ ಪದ್ಧತಿಯಂತಹ ವಿಷಯಗಳೂ ಇದರೊಂದಿಗೆ ಸಂಬಂಧ ಹೊಂದಿವೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಿಸಿತು. ಹೀಗಾಗಿ ಈ ಸಂಕೀರ್ಣ ಸಾಂವಿಧಾನಿಕ ಪ್ರಶ್ನೆಗಳನ್ನು ಬಗೆಹರಿಸಲು ಪ್ರಕರಣವನ್ನು ಒಂಬತ್ತು ನ್ಯಾಯಮೂರ್ತಿಗಳ ಬೃಹತ್ ಪೀಠಕ್ಕೆ ವರ್ಗಾಯಿಸಲಾಯಿತು.

ಸದ್ಯ ಒಂಬತ್ತು ನ್ಯಾಯಮೂರ್ತಿಗಳ ಪೀಠದ ಮುಂದಿರುವ ಪ್ರಶ್ನೆಗಳು

ಪ್ರಸ್ತುತ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಪೀಠವು ಕೇವಲ ಶಬರಿಮಲೆಯ ಬಗ್ಗೆ ಮಾತ್ರವಲ್ಲದೆ, ಮಹಿಳೆಯರಿಗೆ ದೇವಾಲಯ, ಮಸೀದಿ ಪ್ರವೇಶ ಸಂಬಂಧಿಸಿದ ವಿಶಾಲವಾದ ಸಾಂವಿಧಾನಿಕ ಅಂಶಗಳನ್ನು ಪರಿಶೀಲಿಸುತ್ತಿದೆ.

ಕೋವಿಡ್-19 ಸಾಂಕ್ರಾಮಿಕದ ಕಾರಣದಿಂದಾಗಿ ಈ ಪೀಠದ ವಿಚಾರಣೆಯು ದೀರ್ಘಕಾಲ ಮುಂದೂಡಲ್ಪಟ್ಟಿತ್ತು. ನಂತರ ಪೀಠದಲ್ಲಿದ್ದ ಕೆಲವು ನ್ಯಾಯಮೂರ್ತಿಗಳು ನಿವೃತ್ತರಾದ ಕಾರಣ, ಪೀಠವನ್ನು ಪುನರ್ರಚಿಸುವ ಅಗತ್ಯ ಉಂಟಾಯಿತು. ಇದೀಗ ವಿಚಾರಣೆ ನಡೆಯುತ್ತಿದೆ. ವಿಚಾರಣೆಯ ಆರಂಭದಲ್ಲಿ ಪೀಠವು ಧರ್ಮ ಮತ್ತು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ 7 ಪ್ರಮುಖ ಕಾನೂನಾತ್ಮಕ ಪ್ರಶ್ನೆಗಳನ್ನು ಪೀಠವು ರೂಪಿಸಿದೆ.

ಪ್ರಶ್ನೆ 1: ಸಂವಿಧಾನದ ವಿಧಿ 25ರ ಅಡಿಯಲ್ಲಿ ರಕ್ಷಿಸಲ್ಪಟ್ಟ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿ ಎಷ್ಟು ಅಥವಾ ಒಂದು ಆಚರಣೆಯು ಧರ್ಮದ ಅವಿಭಾಜ್ಯ ಅಂಗವೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವ ಅಧಿಕಾರ ನ್ಯಾಯಾಲಯಕ್ಕೆ ಇದೆಯೇ?

ಪ್ರಶ್ನೆ 2: ಧಾರ್ಮಿಕ ಆಚರಣೆಯ ಹೆಸರಿನಲ್ಲಿ ಸಮಾನತೆಯ ಹಕ್ಕನ್ನು ನಿರಾಕರಿಸಬಹುದೇ?

ಪ್ರಶ್ನೆ 3: ವಿಧಿ 25(1)ರಲ್ಲಿ ಉಲ್ಲೇಖಿಸಲಾದ ''ನೈತಿಕತೆ'' ಎಂದರೆ ಅದು ಕೇವಲ ಸಾಂವಿಧಾನಿಕ ನೈತಿಕತೆಯೇ ಅಥವಾ ನಿರ್ದಿಷ್ಟ ಧರ್ಮದ ನೈತಿಕತೆಯೇ?

ಪ್ರಶ್ನೆ 4: ವಿಧಿ 26ರ ಅಡಿಯಲ್ಲಿ ಧಾರ್ಮಿಕ ಪಂಗಡಗಳಿಗೆ ಇರುವ ತಮ್ಮದೇ ಆದ ಆಚರಣೆಗಳನ್ನು ನಿರ್ವಹಿಸುವ ಹಕ್ಕು, ವಿಧಿ 25ರ ಅಡಿಯಲ್ಲಿ ವ್ಯಕ್ತಿಗಿರುವ ಧಾರ್ಮಿಕ ಸ್ವಾತಂತ್ರ್ಯಕ್ಕೆ ಪೂರಕವಾಗಿದೆಯೇ ಅಥವಾ ಅದನ್ನು ಮೀರಿ ನಿಲ್ಲುತ್ತದೆಯೇ?

ಪ್ರಶ್ನೆ 5: ಧಾರ್ಮಿಕ ಆಚರಣೆಗಳಲ್ಲಿ ನ್ಯಾಯಾಲಯವು ಎಷ್ಟು ಮಟ್ಟಿಗೆ ಪ್ರವೇಶಿಸಬಹುದು? ಧಾರ್ಮಿಕ ಮುಖ್ಯಸ್ಥರ ನಿರ್ಧಾರಗಳನ್ನು ನ್ಯಾಯಾಲಯವು ಪ್ರಶ್ನಿಸಬಹುದೇ?

ಪ್ರಶ್ನೆ 6: ವಿಧಿ 25(2)() ಅಡಿಯಲ್ಲಿ ಬರುವ ''ಹಿಂದೂ ಧಾರ್ಮಿಕ ಸಂಸ್ಥೆಗಳು'' ಎಂಬ ಪದದ ವ್ಯಾಪ್ತಿ ಏನು? ಶಬರಿಮಲೆ ದೇವಸ್ಥಾನದಂತಹ ನಿರ್ದಿಷ್ಟ ಸಂಪ್ರದಾಯಗಳನ್ನು ಅನುಸರಿಸುವವರನ್ನು ಪ್ರತ್ಯೇಕ ಧಾರ್ಮಿಕ ಪಂಗಡ ಎಂದು ಪರಿಗಣಿಸಬೇಕೇ?

ಪ್ರಶ್ನೆ 7: ಧರ್ಮದ ಆಚರಣೆಗಳಿಗೆ ಸಂಬಂಧಿಸಿದಂತೆ, ಆ ಧರ್ಮಕ್ಕೆ ಸೇರದ ವ್ಯಕ್ತಿಗಳು ಅಥವಾ ಆ ಆಚರಣೆಯಿಂದ ಬಾಧಿತರಾಗದ ವ್ಯಕ್ತಿಗಳು ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಆಚರಣೆಯನ್ನು ಪ್ರಶ್ನಿಸಬಹುದೇ?

ಮರುಪರಿಶೀಲನಾ ಅರ್ಜಿಯ ಸಂದರ್ಭದಲ್ಲಿ ಇಂತಹ ವಿಶಾಲವಾದ ಕಾನೂನಾತ್ಮಕ ಪ್ರಶ್ನೆಗಳನ್ನು ಉನ್ನತ ಪೀಠಕ್ಕೆ ವರ್ಗಾಯಿಸಬಹುದೇ ಎಂಬ ತಾಂತ್ರಿಕ ಪ್ರಶ್ನೆ ಎದ್ದಿತ್ತು. ಆದರೆ, 2020ರ ಫೆಬ್ರವರಿಯಲ್ಲಿ ಪೀಠವು ಇದನ್ನು ಸಮರ್ಥಿಸಿ, ಸಾಂವಿಧಾನಿಕ ಅಂಶಗಳನ್ನು ನಿರ್ಧರಿಸಲು ತನಗೆ ಅಧಿಕಾರವಿದೆ ಎಂದು ಸ್ಪಷ್ಟಪಡಿಸಿತು. ಸದ್ಯ ''ಅಗತ್ಯ ಧಾರ್ಮಿಕ ಆಚರಣೆಗಳು'' ಯಾವುವು ಮತ್ತು ಅವುಗಳಲ್ಲಿ ನ್ಯಾಯಾಲಯ ಎಷ್ಟು ಮಟ್ಟಿಗೆ ಹಸ್ತಕ್ಷೇಪ ಮಾಡಬಹುದು ಎಂಬುದು ಈ ವಿಚಾರಣೆಯ ಪ್ರಮುಖ ಭಾಗವಾಗಿದೆ.

ಮಹಿಳೆಯರಿಗೆ ಮತ್ತೆ ಮುಚ್ಚಲಿವೆಯೇ ಶಬರಿಮಲೆ?

ಈ ಎಲ್ಲ ವಾದ ವಿವಾದಗಳ ನಡುವೆ ಮಹಿಳೆಯರಿಗೆ ಮತ್ತೆ ಶಬರಿಮಲೆ ಬಾಗಿಲು ಮುಚ್ಚಲಿವೆಯೇ ಎಂಬ ಪ್ರಶ್ನೆ ಹುಟ್ಟಿದೆ. ಸದ್ಯಕ್ಕೆ, 2018ರ ತೀರ್ಪು ಜಾರಿಯಲ್ಲಿದೆ. ಅಂದರೆ ಕಾನೂನುಬದ್ಧವಾಗಿ ಮಹಿಳೆಯರ ಪ್ರವೇಶಕ್ಕೆ ತಡೆ ಇಲ್ಲ. ಆದರೆ 9 ನ್ಯಾಯಮೂರ್ತಿಗಳ ಪೀಠವು ನೀಡುವ ಅಂತಿಮ ತೀರ್ಪಿನ ಮೇಲೆ ಎಲ್ಲವೂ ಅವಲಂಬಿತವಾಗಿದೆ. ಆದರೆ ಮಹಿಳೆಯರ ಪರವಾಗಿ ನಿಲ್ಲಬೇಕಾದ ಕೇಂದ್ರ ಸರ್ಕಾರವು ಮಹಿಳಾ ವಿರೋಧಿ ಧೋರಣೆಯನ್ನು ತಳೆದಿದೆ. ಮಹಿಳೆಯರಿಗೆ ಶಬರಿಮಲೆ ಪ್ರವೇಶಕ್ಕೆ ಅವಕಾಶ ನೀಡಬಾರದು. ಇದು ಧಾರ್ಮಿಕ ಸಂಪ್ರದಾಯ ಎಂದು ಸಮರ್ಥಿಸಿಕೊಂಡಿದೆ!

ಈ ವಾದ ವಿವಾದದ ಬಳಿಕ ಒಂದು ವೇಳೆ ಪೀಠವು ''ಧಾರ್ಮಿಕ ಸಂಪ್ರದಾಯಗಳು ಮತ್ತು ನಂಬಿಕೆಗಳು ಸಾಂವಿಧಾನಿಕ ನೈತಿಕತೆಗಿಂತ ಮೇಲು'' ಎಂದು ಅಭಿಪ್ರಾಯಪಟ್ಟರೆ ಮತ್ತೆ ಹಳೆಯ ಸಂಪ್ರದಾಯ ಮರುಕಳಿಸಬಹುದು. ''ಲಿಂಗ ಸಮಾನತೆಯೇ ಪರಮೋಚ್ಚ'' ಎಂದು ಸಾರಿದರೆ 2018ರ ತೀರ್ಪು ಗಟ್ಟಿಯಾಗಲಿದೆ. ಸದ್ಯ ಸಾಂವಿಧಾನಿಕ ಪೀಠವು ಧರ್ಮ ಮತ್ತು ಕಾನೂನಿನ ನಡುವಿನ ಸೂಕ್ಷ್ಮ ಗೆರೆಯನ್ನು ಗುರುತಿಸುವ ಪ್ರಕ್ರಿಯೆಯಲ್ಲಿದೆ. ಆದರೆ ಯಾವುದೇ ಧರ್ಮದ ಆಚರಣೆಗಳು ಮಹಿಳೆಯರನ್ನು ತುಚ್ಛವಾಗಿ ಕಾಣುವುದಾದರೆ ಅದು ಧರ್ಮವಾಗುವುದೇ?

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR